(Sri J. B. MALLARADHYA)

to say that it cannot be revised or modified ? Let them hear the members and how the order has come as a great hardship to the people. I think it is an order which has been taken without taking all aspects of the question into consideration. I would like the Hon'ble Chief Minister to reconsider the question and agree for a discussion.

Mr. SPEAKER.—When the Chief Minister has given a reply there is no alternative for me. The two subjects suggested by the Hon'ble Member come under official business and if the Government do not want them to be discussed, the Speaker has no alternative but to say that they cannot be discussed as official business. Of course if the members want any special resolution to be moved on the K. G. F. Mines, I would just consider what should be done in the circumstances.

Sri C. J. MUCKANNAPPA.—Sir, why not other one also.

Mr. SPEAKER.—Of course we can give notice of a resolution on any subject. But, I think there is an opportunity to discuss this at the time of supplementary demands.

2-00 P. M.

MYSORE LAND REFORMS BILL, 1961 AS REPORTED BY JOINT SELECT COMMITTEE

Motion to consider—debate *contd.*

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ ಈ ಭೂಸುಧಾರಣೆ ವಿಧೇಯಕದ ವರದಿಯ ಬಗ್ಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟನ್ನು ಈ ಸಭೆಯ ಮುಂದೆ ಇಟ್ಟು ಅದರಮೇಲೆ ಡಿಸ್‌ಕಷನ್ ಆಗುತ್ತಿರುವ ಸಂದರ್ಭದಲ್ಲಿ ನಾನು ನಾಲ್ಕು ಮಾತುಗಳನ್ನು ಆಡಬೇಕೆಂದು ಇಚ್ಛಿಸುತ್ತೇನೆ. ಈ ವಿಚಾರದಲ್ಲಿ ಮಾತನಾಡುವಾಗ ಬಹುಶಃ ಏನಾದರೂ ಕರ್ಣ ಕಠೋರವಾದ ಕೆಲವು ಮಾತುಗಳನ್ನು ನಾನು ಆಡಬಹುದು, ಟೀಕೆ ಮಾಡಬಹುದು. ಅದನ್ನು ವಿಧಿಯಿಲ್ಲದೆ ಮಾಡಬೇಕಾಗಿದೆ. ಆದ್ದರಿಂದ ದಯವಿಟ್ಟು ತಾವುಗಳು ಯಾರೂ ಮನಸಿಗೆ ಬೇಜಾರು ಮಾಡಿಕೊಳ್ಳಬಾರದು ಎಂದು ನಾನು ಮೊದಲೇ ಕೇಳಿಕೊಂಡು ಮಾತನಾಡುತ್ತೇನೆ.

ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಬಿಲ್ಲನ್ನು ಈ ಸಭೆಯ ಮುಂದೆ ಇಡುತ್ತಾ ಇರುವಾಗ ಇದರಲ್ಲಿ ಇಲ್ಲದವರಿಗೆ ಕನಿಕರವನ್ನು ತೋರಿಸುತ್ತಾ ಇರುವುದು ಮತ ಮತ್ತು ಧರ್ಮ ಸಂಸ್ಥೆಗಳಿಗೆ ವಿನಾಯಿತಿ ಕೊಡದೆ ಇರುವುದು ತಪ್ಪು ಎಂದು ಅನೇಕರು ಹೇಳಿದ್ದಾರೆ. ಆ ಮೇಲೆ ಕೊನೆಯದಾಗಿ ''ಸರ್ವೇ ಜನಾ ಸುಖಿನೋ ಭವಂತು'' ಎಂದು ಸ್ವಪ್ನದ ಮಾತುಗಳನ್ನು ಆಡಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಾರಾಧ್ಯರು ಇದಕ್ಕೇ ಬಹಳ ಸ್ವಾಗತ ಕೊಟ್ಟು ಮಂತ್ರಿಗಳಿಗೆ ಬುಜತಟ್ಟಿ ಶಾಬಾಶ್‌ಗಿರಿ ಕೊಟ್ಟಿದ್ದಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬಹಳ ಶಾಬಾಸ್‌ಗಿರಿ ಕೊಟ್ಟಿಲ್ಲ. ಸ್ವಲ್ಪ ಸ್ವಲ್ಪ ಕೊಟ್ಟಿದ್ದೇನೆ.

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.—ಎಕನಾಮಿಕ್ ಜಸ್ಟೀಸ್, ಸೋಷಿಯಲ್ ಜಸ್ಟೀಸ್ ಕೊಟ್ಟು ಇಂಥಾ ಬಿಲ್ಲನ್ನು ತಂದಿರುವುದಕ್ಕೆ ಇವರನ್ನು ಭಗೀರಥ ಮಹಾರಾಜರಿಗೆ ಹೋಲಿಸಿ ಬಹಳ ಮೆಚ್ಚಿಕೊಂಡರು. ಅವರು ಸ್ವಲ್ಪ restriction on wealth on other sections is necessary for social Justies and social stebility. ಮಾಡಿದ ಹಾಗೆ ಇರಬೇಕು ಮತ್ತು ಮಾಡಿದ ಹಾಗೆ ಇರಬಾರದು ಎನ್ನುವ ಹಾಗೆ ಮಾತನಾಡಿ ಅಷ್ಟಕ್ಕೆ ನಿಲ್ಲಿಸಿದ್ದಾರೆ. ಮಾನ್ಯ ಕಾಂಗ್ರೆಸ್ ಸಹೋದರರಾದ ಶ್ರೀ ಕರ್‌ಲಿಂಗಣ್ಣನವರು ಮಾತನಾಡುತ್ತಾ ಹೆಣ್ಣು ಮಕ್ಕಳಿಗೆ ತೋರಿಸಿರುವ ನೀತಿ, ಧಾರ್ಮಿಕ ಸಂಸ್ಥೆಗಳಿಗೆ ತೋರಿಸಿರುವ ಔದಾರ್ಯ, ಜಮೀನು ಉಳುವವರಿಗೆ ತೋರಿಸಿರುವ ಕನಿಕರ, ಗೇಣುದಾರರಿಗೆ ತೋರಿಸಿರುವ ಕ್ರೌರ್ಯ ಇವುಗಳನ್ನೆಲ್ಲಾ ವಿವರಿಸಿ ಪರಿಮಿತಿಯ ಮಟ್ಟವನ್ನು ಇನ್ನೂ ಕಡಿಮೆ ಮಾಡಬೇಕು ಎಂಬುದಾಗಿ ಹೇಳಿದ್ದಾರೆ. ನನಗೆ ಅದನ್ನೆಲ್ಲಾ ಕೇಳಿ ಒಂದು ಕತೆ ನೆನಪಿಗೆ ಬರುತ್ತದೆ, ಅದು ಏನೆಂದರೆ: ಕಾಗೆ ತನ್ನ ಮಕ್ಕಳನ್ನು ಕೋಗಿಲೆ ಎಂದು ಹೇಳಿತಂತೆ. ಗುಬ್ಬಿ ತನ್ನ ಮಕ್ಕಳನ್ನು ಹೆಬ್ಬುಲಿ ಎಂದು ಹೇಳಿತಂತೆ ಗುಂಗಾಡಿ ತನ್ನ ಮಕ್ಕಳನ್ನು ಗಂಗಾಧರ ಎಂದು ಹೇಳಿತಂತೆ. ಹಾಗೆ ಈ ಬಿಲ್ಲಿನ ಪರಿಸ್ಥಿತಿ ಆಗಿದೆ. ಇದು ನಿಜವಾಗಿಯೂ ಒಂದು ದೊಡ್ಡ ಹುಚ್ಚರ ಗುಂಪಿನ ಮಧ್ಯದಲ್ಲಿ ತಲೆ ಸರಿಯಾಗಿರುವ ಮನುಷ್ಯ ನಿಂತುಕೊಂಡರೆ ಅವನು ನಾನು ಹುಚ್ಚನೋ ಅವರೇ ಹುಚ್ಚರೋ ನಿಜವಾಗಿ ಏನಾಗಿದೆ ಎನ್ನುವ ಪರಿಸ್ಥಿತಿ ಬರುತ್ತದೆ. ಹೀಗಾದರೆ ಹೇಗೆ? ಒಬ್ಬ ಮನುಷ್ಯ ತಾನು ಸಂಪಾದಿಸಿದ ಯಾವ ಬಗೆಯ ಇತರ ಆಸ್ತಿಪಾಸ್ತಿಯನ್ನು ಮಾಡದೆ ಬರೀ ಬರೀ ಭೂಮಿಯನ್ನೇ ತನ್ನ ತಾಯಿ ಕಾಪಾಡಿದ ಹಾಗೆ ಭೂಮಿಯನ್ನು ಕಾಪಾಡಿಕೊಂಡು ಭೂಮಿಯನ್ನು ತೆಗೆದುಕೊಂಡರೆ ಅದು ಅಷ್ಟು ಅಪರಾಧವೇ? ಇಲ್ಲದೆ ಇರುವುದನ್ನು ಇದ್ದದ್ದು ಮಾಡಿ ರಾಕ್ ರೇಕ್ ಮಾಡಿ ಕೊಲೆ ಮಾಡಿದವನನ್ನು ಬಿಡಿಸಿ ಬಿಟ್ಟು ಕೊಲೆ ಮಾಡದೆ ಇರುವವನನ್ನು ಜೈಲಿಗೆ ಹಾಕಿ ಲಕ್ಷ ಲಕ್ಷ ಸಂಪಾದನೆ ಮಾಡುವ ವಕೀಲರು ಅನೇಕರಿದ್ದಾರೆ. ಅವರಿಗಿಂತ ಇದು ಅಪರಾಧವೇ? ಬಡರೋಗಿಗಳಿಗೋಸ್ಕರ ಆಸ್ಪತ್ರೆಯಲ್ಲಿ ಕೊಡತಕ್ಕ ಔಷಧಿಯನ್ನು ಸಿಕ್ಕಾಪಟ್ಟೆ ಉಪಯೋಗ ಮಾಡಿಕೊಂಡು ಬರೀ ನೀರನ್ನು ರೋಗಿಗಳಿಗೆ ಕೊಟ್ಟು ಬರೀ ನೀರಿನ ಇಂಜಕ್ಷನ್ ಚುಚ್ಚಿ ಬಿಟ್ಟು ಲಕ್ಷ ಲಕ್ಷ ರೂಪಾಯಿಗಳ ಸಂಪಾದನೆ ಮಾಡಿಕೊಂಡು ಉದ್ದುದ್ದನೆ ಕಾರಿನಲ್ಲಿ ಓಡಾಡುತ್ತಾ ಉಪ್ಪರಿಗೆಯ ಮನೆಯಲ್ಲಿ ವಾಸ ಮಾಡುವ ಡಾಕ್ಟರುಗಳು ಮಾಡುವ ಅಪರಾಧಕ್ಕಿಂತ ಇದು ಅಪರಾಧವೇ? ಆ ಬ್ಯಾಂಕಿನಲ್ಲಿ ಷೇರು ಬೇಕು, ಈ ಬ್ಯಾಂಕಿನಲ್ಲಿ ಷೇರು ಬೇಕು ಎಂದು ಷೇರು ತೆಗೆದುಕೊಂಡುಬಿಟ್ಟು ದಳ್ಳಾಳಿ ಹಾಗೆ ಮಧ್ಯದಲ್ಲಿ ಹಣವನ್ನು ತಮ್ಮ ಹೆಸರಿನಲ್ಲಿ ತೆಗೆದುಕೊಳ್ಳುವುದಕ್ಕಿಂತ ಇದು ಅಪರಾಧವೇ? ಈ ಮಿಲ್ಲಿನ ಏಜೆನ್ಸಿ ಬೇಕು, ಆ ಮಿಲ್ಲಿನ ಏಜೆನ್ಸಿ ಬೇಕು, ಇದರ ಡಿಸ್ಟ್ರಿಬ್ಯೂಟರ್ ಆಗಬೇಕು, ಅದರ ಪಾರ್ಟನರ್ ಆಗಬೇಕು ಎಂದು ಇದನ್ನೆಲ್ಲಾ ಮಾಡಿಕೊಂಡು ಮೆರೆಯುತ್ತಾ ಇರುವ ಜನಕ್ಕಿಂತ ಭೂಮಿಯನ್ನು ತೆಗೆದುಕೊಂಡಿರುವವರದು ಅಪರಾಧವೇ? ಇರುವುದಕ್ಕೆ ಕ್ವಾರ್ಟರ್ಸ್ ಓಡಾಡುವುದಕ್ಕೆ ವ್ಯಾನ್ ಗೊತ್ತಾಗದೆ ಇರುವುದನ್ನು ಕೇಳುವುದಕ್ಕೆ ಕ್ಲಾರ್ಕುಗಳ ತಂಡ ಇವುಗಳನ್ನು ಇಟ್ಟುಕೊಂಡು ಕೊನೆಯಲ್ಲಿ ಒಂದು ರುಜು ಮಾಡಿಬಿಟ್ಟು 2 ಸಾವಿರ 3 ಸಾವಿರ ರೂಪಾಯಿ ಸಂಬಳವನ್ನು ತೆಗೆದುಕೊಳ್ಳುವ ಆಫೀಸರು 30 ದಿವಸಗಳನ್ನು ಎಣಿಸುತ್ತಾನೆ. ಇವನು ಅವನಿಗಿಂತ ಪಾಪ ಮಾಡುತ್ತಾನೆಯೇ?

5 ವರ್ಷ ಮಿನಿಸ್ಟ್ರಿಗಿರಿ ಮಾಡಿ ಮನೆ ಕಟ್ಟಿಕೊಂಡು ಕಾರು ತೆಗೆದುಕೊಂಡು, ಮಕ್ಕಳ ಮದುವೆ ಮಾಡಿಕೊಂಡು ಬೇಕಾದಷ್ಟು ಹಣವನ್ನು ಸಂಪಾದನೆ ಮಾಡಿಕೊಂಡು, ಬೇಕಾದಷ್ಟು ಫರ್‌ನಿಚರ್ ಮಾಡಿಸಿಕೊಂಡು, ಬೆಳ್ಳಿ ಬಂಗಾರ ಇವುಗಳನ್ನೆಲ್ಲಾ ಕೊಂಡುಕೊಂಡು ಮಿನಿಸ್ಟ್ರಿಗಿಂತ ಇವನು ಅಪರಾಧ ಮಾಡಿದ್ದಾನೆಯೇ! ಬಾಕಿಯವರು ಹಾಗೆ ಮನೆ ಕಟ್ಟಿಕೊಳ್ಳದೆ ಷೇರ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊಂಡುಕೊಳ್ಳದೆ, ಭೂಮಿಯನ್ನು ತೆಗೆದುಕೊಂಡಿದ್ದರೆ ಅದು ಅಪರಾಧವೇ? ಈ ಬಿಲ್ಲಿನ ಮೇಲೆ ಚರ್ಚೆ ನಡೆಯುತ್ತಾ ಇರುವುದನ್ನು ನೋಡಿದರೆ ಒಬ್ಬ ಜಮೀನ್ದಾರನ ಬೆಲೆಯನ್ನು ಒಬ್ಬ ಕೇಡಿ, ಕ್ರಿಮಿನಲ್ ಕೇಡಿಗಿಂತ 100ರಷ್ಟು ಸಾವಿರದಷ್ಟು ಹೀನಾಯವಾಗಿದೆ. ಅವನನ್ನು ಪಾತಾಳದಲ್ಲಿ ತುಳಿದಿದ್ದಾರೆ. ಅವನ ಮಕ್ಕಳಿಗೆ ಬಟ್ಟೆ ಬೇಡವೇ? ವಿದ್ಯೆ ಬೇಡವೇ ಔಷಧೋಪಚಾರ ಬೇಡವೇ? ಅವನ ಹೆಂಡತಿ ಮಕ್ಕಳು ಸುಧಾರಿಸಿ ಹೊಂದಬೇಡವೇ? ಆ ಒಂದು ಸ್ಥಿತಿಗೆ ಈ ಬಿಲ್ಲನ್ನು ತೆಗೆದುಕೊಂಡು ತಂದಿಟ್ಟಿದ್ದಾರೆ. ಈ ಬಿಲ್ಲಿನಲ್ಲಿ ಹೆಣ್ಣು ಮಕ್ಕಳಿಗೆ ಅವಮಾನ ಉಂಟಾಗಿದೆ. ಶ್ರೀ ಮಲ್ಲಾರಾಧ್ಯರು ಬಹಳ ಸೂಕ್ಷ್ಮವಾಗಿ ಒಂದೆ ಚಟಿಕೆಯಲ್ಲಿ ಬಹಳ ಲೈಟಾಗಿ ಈ ಬಿಲ್ಲಿನ ಮೇಲೆ ಮಾತನಾಡಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಏನು ಸ್ವಾಮಿ ಇದು ಶ್ರೀಮತಿ ನಾಗರತ್ನಮ್ಮನವರು ಮಲ್ಲಾರಾಧ್ಯರು ಹೆಣ್ಣು ಮಕ್ಕಳಿಗೆ ಅವಮಾನ ಎಂದು ಹೇಳಿದರು. I am known for my chivalry. Chivalrous to ladies ಎನ್ನುವುದು ನನ್ನ ಟೈಟಲ್. ಈ ಅಮ್ಮ ಅದನ್ನು ಕಿತ್ತು ಕೊಳ್ಳುತ್ತಿದ್ದಾರೆ.

ಶ್ರೀಮತಿ. ಕೆ. ಎಸ್. ನಾಗರತ್ನಮ್ಮ.—ಇಂಥಾ ಘನವಾದ ರಿಪೋರ್ಟನ್ನು ತಯಾರು ಮಾಡುವುದಕ್ಕೆ 46 ಜನ 64 ಸಾರಿ ಸಭೆ ಸೇರಿದ್ದರು. ಇದರಮೇಲೆ ಮಾನ್ಯ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರ ಕಣ್ಣಿಗೆ ಬಿದ್ದರು ಒಬ್ಬಳೇ ಮಹಿಳೆ ಅವರು ಹೇಳಿರುವ ರೆಪ್ರೆಜೆಂಟೇಷನ್ ಎಷ್ಟುಮಟ್ಟಿಗೆ ನಡೆದಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಎಷ್ಟೋ ತರಹ ಹೆಣ್ಣು ಮಕ್ಕಳಿಗೆ ಎಕ್ಸ್‌ಪ್ಲಾಯ್ಟ್ ಮಾಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—I want a clarification from Hon'ble Lady Member. ಯಾವ ರೀತಿ ಈ ಬಿಲ್ಲಿನಲ್ಲಿ ಹೆಣ್ಣುಮಕ್ಕಳಿಗೆ ಮಾತ್ರ ಎಕ್ಸ್‌ಪ್ಲಾಯ್ಟ್ ಮಾಡುವುದಕ್ಕೆ ಅವಕಾಶ ಕೊಟ್ಟಿದೆ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ಮುಂದೆ ಹೇಳುತ್ತೇನೆ. ದಯವಿಟ್ಟು ಸಾವಧಾನದಿಂದ ಕುಳಿತುಕೊಂಡು ಕೇಳಿ. ಹೆಣ್ಣು ಮಕ್ಕಳಿಗೆ ಸ್ಕೂಲು ಮತ್ತು ಕಾಲೇಜ್‌ಗಳಲ್ಲಿ ಜಾಗವಿಲ್ಲ. ಟೀಚರ್ಸ್ ಟ್ರೈನಿಂಗ್ ಕಾಲೇಜ್ ಇಲ್ಲ. ಆಟ ಆಡುವುದಕ್ಕೆ ಜಾಗವಿಲ್ಲ. ಅವರಿಗೆ ಸ್ಕಾಲರ್‌ಷಿಪ್ ಇಲ್ಲ. ಓದಿದವರಿಗೆ ಕೆಲಸವಿಲ್ಲ. ಅವರು ಮಾಡಿದ ಕೆಲಸಕ್ಕೆ ಮಾನ್ಯತೆ ಇಲ್ಲ. ಇದೂ ಒಂದು ಎಕ್ಸ್‌ಪ್ಲಾಯ್ಟೇಷನ್ ರಾಜಕೀಯಕ್ಕೆ ಬಂದರೆ ಚೀಫ್‌ಮಿನಿಸ್ಟರು ಹೆಣ್ಣು ಮಕ್ಕಳ ಹಿಂದೆ ಸಿ. ಐ. ಡಿ. ಹಾಕುತ್ತಾರೆ. ದೊಡ್ಡವರ ಗಮನಕ್ಕೆ ತಂದರೆ ಅದು ಏನೇ ಇರಲಿ ಉಡಾಫೆ ಮಾಡುತ್ತಾರೆ. ನೀವು ಇದಕ್ಕೆಲ್ಲಾ ಹೆದರಿಕೊಳ್ಳುತ್ತೀರಾ ಎಂದು ಹೇಳುತ್ತಾರೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮನ ಹಾಗೆ ಇರಬೇಕು ಎಂದು ಹಾಸ್ಯ ಮಾಡುತ್ತಾರೆ. ಇದು ಒಂದು ತರಹ ಎಕ್ಸ್‌ಪ್ಲಾಯ್ಟೇಷನ್.

ಇವೆಲ್ಲ ಏನೇ ಇರಲಿ, ಕೊಂಚಕಾಲ ಮನರಂಜನೆಗಾಗಿ ರಿಕ್ರಿಯೇಷನ್ ಕ್ಲಬ್‌ಗೆ ಹೋಗಿ, ಸ್ವಲ್ಪ ಆಟ ಪಾಟಗಳನ್ನಾದರೂ ಆಡೋಣವೆಂದರೆ, ಅಂಥ ಕಡೆಗೆ ಒಬ್ಬರು ದೊಡ್ಡಮನುಷ್ಯರು ಬಂದು 'ಇವರಿಗೇಕೆ ಇಂಥ ಜಾಗ ? ಇದನ್ನು ಗಂಡಸರ ಕಾಲೇಜಿಗೋ ಕಚೇರಿಗೊ ಇಟ್ಟು ಕೊಳ್ಳೋಣ' ಎಂದು ಹೇಳುತ್ತಾರೆ! ಇವರೆಲ್ಲರಿಗೂ ಹೆಣ್ಣುಮಕ್ಕಳಮೇಲೆ ಕಣ್ಣು! ಹಾಗಿದ್ದರೂ 'ಹೆಣ್ಣುಮಕ್ಕಳಿಗೆ ಎಲ್ಲ ಅನುಕೂಲಗಳನ್ನೂ ಕೊಟ್ಟಿದ್ದೇವೆ, ಸ್ವಿಟ್ಜರ್ ಲ್ಯಾಂಡ್‌ನಲ್ಲಿ ಕೂಡ ಕೊಟ್ಟಿಲ್ಲದೇ ಇರುವ ಓಟಿನ ಹಕ್ಕನ್ನು ಇಲ್ಲಿ ನಾವು ಕೊಟ್ಟಿದ್ದೇವೆ' ಎಂದು ಹೇಳುತ್ತಾರೆ! ಹೆಣ್ಣು ಮಕ್ಕಳನ್ನು ಪೋಷಣೆಮಾಡುವುದಕ್ಕಾಗಿ ಈ ಓಟಿನ ಹಕ್ಕನ್ನು ಇವರಿಗೆ ಕೊಟ್ಟಿದ್ದಾರೆಯೇ ಹೊರತು ಬೇರೆ ಕಾರಣದಿಂದಲ್ಲ. ಹೆಣ್ಣುಮಕ್ಕಳಿಗೆ ವಿದ್ಯೆಯಿಲ್ಲ, ಬುದ್ಧಿಯಿಲ್ಲ ಎಂದು ಹೀಗೆಲ್ಲ

ಮಾಡುತ್ತಿದ್ದಾರೆ. ಇಂಥ ಒಂದು ಬಿಲ್ಲನ್ನು ತರುತ್ತೇವೆಂದು ಇವರು ಹೇಳಿದ್ದಿದ್ದರೆ ಒಬ್ಬ ಹೆಣ್ಣು ಮಗಳೂ ಕೂಡ ಇವರಿಗೆ ಓಟು ಕೊಡುತ್ತಿರಲಿಲ್ಲವೆಂದು ಧೈರ್ಯವಾಗಿ ಘಂಟಾಘೋಷವಾಗಿ ಹೇಳುತ್ತೇನೆ. ಒಬ್ಬಳು ಗಂಡಸತ್ತ ಹೆಣ್ಣುಮಗಳಾಗಲೀ ಮದುವೆಯಾಗದೆ ಇರುವ ಹೆಣ್ಣು ಮಗಳಾಗಲೀ ಇದ್ದು ಆಕೆಗೆ ಅವರ ತಂದೆತಾಯಿ ಅಣ್ಣ ತಮ್ಮಂದಿರೋ, ಗಂಡನೋ ಸ್ವಲ್ಪ ಭೂಮಿಯನ್ನಿಟ್ಟು ಆಕೆ ಜೀವನ ಮಾಡಿಕೊಳ್ಳಲೆಂದಿದ್ದರೆ ಇಂಥ ಹೆಣ್ಣು ಮಕ್ಕಳಮೇಲೆ ಕಣ್ಣಿಟ್ಟು ಅದನ್ನೂ ಕಸಿದುಕೊಳ್ಳುವವರ ನೀತಿಯೇನು, ಸಂಸ್ಕೃತಿಯೇನು ಎಂದು ಕೇಳುತ್ತೇನೆ. ಇಂಥ ಹೆಣ್ಣುಮಕ್ಕಳು ಮಾನವಾಗಿ ಬಾಳಬೇಡವೆ ? ಈ ಭೂಶಾನ ಮಾಡಿರುವವರನ್ನು ಒಂದು ಪ್ರಶ್ನೆ ಕೇಳುತ್ತೇನೆ. ನಿಮ್ಮ ಕುಟುಂಬದವರ್ಯಾರಾದರೂ ಈ ಹೆಣ್ಣುಮಕ್ಕಳ ಸ್ಥಿತಿಯಲ್ಲಿದ್ದಾರೆಯೆ? ನಿಮ್ಮ ಅಕ್ಕ ತಂಗಿಯರಗಂಡ ಸತ್ತುಹೋಗಿದ್ದರೆ, ಅಣ್ಣನೋ ತಮ್ಮನೋ ಸತ್ತುಹೋಗಿದ್ದರೆ ಅಥವಾ ಅಳಿಯ ಸತ್ತು ಹೋಗಿದ್ದರೆ ಪರಿಸ್ಥಿತಿ ಹೇಗಿರುತ್ತಿತ್ತು ? ಅಥವಾ ನೀವೇ ಸತ್ತುಹೋಗಿದ್ದರೆ ನಿಮ್ಮ ಹೆಂಡತಿಯವರ ಸ್ಥಿತಿ ಏನಾಗುತ್ತಿತ್ತು. ಎಂಬುದನ್ನು ಯೋಚನೆ ಮಾಡಬೇಡವೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).— ಈ ಮಾತುಗಳು ಕೇಳುವುದಕ್ಕೆ ಚೆನ್ನಾಗಿರಬಹುದು, ಆದರೆ ಹೀಗೆಲ್ಲ ಹೇಳಲು ಅವಕಾಶ ಕೊಡುವುದೆ? ನಾವು ಸೆಲೆಕ್ಟ್ ಕಮಿಟಿಯ ಸದಸ್ಯರಾಗಿದ್ದೆವು.' ನಾವು ಸತ್ತಿದ್ದರೆ, ನಮ್ಮ ಹೆಂಡತಿಯವರು ವಿಧವೆಯರಾಗಿದ್ದರೆ ಎಂದು ಹೇಳಿದರೆ..................

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ಮಾನ್ ಮುಕ್ಕಣ್ಣಪ್ಪನವರೇನೂ ಕೋಪ ಮಾಡಿಕೊಳ್ಳಬೇಕಾಗಿಲ್ಲ ; ಸ್ತ್ರೀ ಸಹಜವಾಗಿ ಅವರು ಹೇಳುತ್ತಿದ್ದಾರೆ...............

ಶ್ರೀಮತಿ ಲಕ್ಷ್ಮಿದೇವಿ ರಾಮಣ್ಣ.— I take objection to that statement. ಸ್ತ್ರೀಸಹಜವಾಗಿ' ಎಂದು ಅವರೇ ಹೇಳಬೇಕು ?

ಅಧ್ಯಕ್ಷರು.— ಅದನ್ನು ಅಷ್ಟು Serious ಆಗಿ ತೆಗೆದುಕೊಳ್ಳಬೇಕಾಗಿಲ್ಲ. ಅವರು ತಮ್ಮ ಭಾಷೆಯನ್ನು ಸ್ವಲ್ಪ ಮೃದು ಮಾಡಿದರೆ ಉತ್ತಮ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರಲ್ಲಿ ಹೆಣ್ಣು ಮಕ್ಕಳಿಗೆ ಎಷ್ಟು ಅನ್ಯಾಯವಾಗಿದೆ ಎನ್ನುವುದನ್ನು ಹೇಳಬೇಡವೆ ? ನಾನು ಮೊದಲೇ ಇದನ್ನೆಲ್ಲಾ ಹೇಳಲು ಅವಕಾಶ ಕೇಳಿಕೊಂಡಿದ್ದೇನೆ.

ಶ್ರೀಮತಿ ನಾಗರತ್ನಮ್ಮ (ಗಾಂಧಿನಗರ).—ಅವರು ನೊಂದಿದ್ದಾರೆ, ಹೇಳುತ್ತಾರೆ ; ಆ ನೋವನ್ನು ಅವರೇ ಬಲ್ಲರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಮಕ್ಕಳು ಸಾಯಲಿ, ಗಂಡ ಸಾಯಲಿ ಎಂದು ಹೇಳಬಹುದೆ ?

ಶ್ರೀಮತಿ ಕೆ. ಎಸ್. ನಾರತ್ನಮ್ಮ.—ಅವರಿಗೆ ನಾನು ಹೇಳುವುದನ್ನು ಅರ್ಥಮಾಡಿಕೊಳ್ಳುವ ಪರಿಜ್ಞಾನ ಕೂಡ ಇಲ್ಲ, ಏನುಮಾಡುವುದು !

ನಾನು ಹೇಳಿದಂತೆ ಕಷ್ಟಕ್ಕೊಳಗಾದ ಹೆಣ್ಣುಮಕ್ಕಳ ಚಿತ್ರವನ್ನು ಅವರು ಜ್ಞಾಪಿಸಿಕೊಳ್ಳಲಿ ಸಿನಿಮಾದಲ್ಲಿ ಬರುವಂತೆ ಅವರ ಕಣ್ಣುಮುಂದೆ ಬರುತ್ತದೆ. ನನ್ನ ಮಾತನ್ನು ಮುಗಿಸುವ ಹೊತ್ತಿಗೆ ಶ್ರೀಮಾನ್ ಮುಕ್ಕಣ್ಣಪ್ಪನವರು ವ್ಯತ್ಯಾಸವಾಗುತ್ತಾರೆ. ಆ ಕಷ್ಟವನ್ನು ಅವರ ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಳ್ಳಲಿ ಎಂದು ಹೇಳಿದ್ದೇನೆ ಹೊರತು ಅವರು ಸಾಯಲಿ, ಅವರ ಹೆಂಡತಿ ಸಾಯಲಿ ಎಂದು ಹೇಳಲಿಲ್ಲ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

Social justice economic justice ಎಂದು ಬಾಯಲ್ಲಿ ಹೇಳುವುದು, ಇಂಥ ಕೆಲಸ ಮಾಡುವುದು ! ಇದರಲ್ಲಿ ವಿಚಿತ್ರವಾದ-ಕ್ಲಾಜನ್ನು ಹಾಕಿದ್ದಾರೆ. ಈಗಲಾದರು Social justice ಬರಬೇಕಾದರೆ, 5 ನೆಯ ಕ್ಲಾಜಿನಲ್ಲಿ.

"Any land owner who is a widow, unmarried girl"

ಎನ್ನುವುದನ್ನು ಸೇರಿಸಬೇಕೆಂದು ಹೇಳುತ್ತೇನೆ.

7 ನೆಯ ಕ್ಲಾಜಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು. ಮಾನ್ಯ ಮಂತ್ರಿಗಳು ದಯಯಿಟ್ಟು ಇದನ್ನು ಮಾಡಿದರೆ ಎಷ್ಟೋ ಅನುಕೂಲವಾಗಬಹುದು.

Restoration of possession to tenants ವಿಚಾರದಲ್ಲಿ ಇದನ್ನು retrospective ಆಗಿ ಮಾಡುವ ಬದಲು ಈ ಕಾನೂನು ಬಂದ ನಂತರ ಎಂದು ಮಾಡಿದರೆ ಉತ್ತಮ. ಇಲ್ಲದಿದ್ದರೆ ಕೋರ್ಟುಗಳಿಗೆ ಎಷ್ಟೋ ಕೇಸುಗಳು ಬಂದು ಜನರು ತೊಡೆದು ಹೋಗಿರುತ್ತಾರೆ.

8ನೆಯ ಕ್ಲಾಜಿನಲ್ಲಿ ರೆಂಟಿನ ಬಗ್ಗೆ ನಾಲ್ಕನೆಯ ಒಂದುಭಾಗ, ಐದನೆಯ ಒಂದುಭಾಗ ಎಂದು ಗೊತ್ತುಮಾಡಿದರೆ. ಇದಕ್ಕೆ ಬದಲು ಮೂರನೆಯ ಒಂದುಭಾಗ, ನಾಲ್ಕನೆಯ ಒಂದು ಭಾಗ ಎಂದು ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬೆಂಕಿ ಹತ್ತಿಕೊಂಡಿರುವ ಮನೆಯಲ್ಲಿ ಏನು ಸಿಕ್ಕಿಕೊಂಡಿದೆಯೋ ಅಷ್ಟನ್ನು ತೆಗೆದುಕೊಳ್ಳುವ ಹಾಗಾಗಬಹುದೆಂದು ಕಾಣುತ್ತದೆ.

8 (3)ನೆಯ ಕ್ಲಾಜಿನಲ್ಲಿ average yield of crops ವಿಚಾರದಲ್ಲಿ ನಿರ್ಧರಿಸುವವರು "prescribed Authority" ಎಂದಿದೆ. ಇದಕ್ಕೆ ಸಾಧಾರಣ ರೆವಿನ್ಯೂ ಅಧಿಕಾರಿಗಳನ್ನು ಹಾಕಿದರೆ ಪ್ರಯೋಜನವಿಲ್ಲ. ಅನುಭವವಿರುವ ವ್ಯವಸಾಯ ಇಲಾಖೆಯ ಅಧಿಕಾರಿಗಳಿಗೆ ಈ ಕೆಲಸವನ್ನು ವಹಿಸಿದರೇ ಎಷ್ಟೋ ಅನುಕೂಲವಾಗಬಹುದು.

19ನೆಯ ಕ್ಲಾಜಿನಲ್ಲಿ Restriction on transfer of resumed land ವಿಚಾರವಿದೆ. ಏನಾದರೂ ತುರ್ತಾಗಿ ಭೂಮಿಯನ್ನು ಮಾರಬೇಕಾದರೆ ಆರು ವರ್ಷದೊಳಗೆ ಮಾಡಕೂಡದೆಂದಿದೆ. ಇದರಿಂದ ಬಹಳ ತೊಂದರೆಯಾಗಬಹುದು. ಇದನ್ನು ಸ್ವಲ್ಪ ಕಡಮೆ ಮಾಡಬೇಕು.

Sri J. VENKATAPPA.—Regarding rent the Hon'ble Member said it should be one-third and one forth, should it be on the gross produce or net produce ?

Sri K. S. NAGARATHNAMMA.—Grows produce.

ಕ್ಲಾಸ್ 22 (ಎ) ನಲ್ಲಿ 2 ವರ್ಷ ರೆಂಟ್ ಕೊಡದೇ ಇರುವವರೆಗೂ ಟೆನೆಂಟ್‌ನ್ನು ಬಿಡಿಸುವ ಹಾಗಿಲ್ಲ ಎಂದು ಇದೆ. ಇದು ಹೇಗಿದೆ ಎಂದರೆ ಮೈನರ್ ಮಕ್ಕಳಾಗಲೀ, ಫಿಸಿಕಲ ಹ್ಯಾಂಡಿಕ್ಯಾಪ್ಡ್ ಆಗಲೀ ಎರಡು ವರ್ಷ ಆಗುವವರೆಗೂ ಗದ್ದೆ ಮಣ್ಣು ತಿಂದುಕೊಂಡಿರಬೇಕೇ ಹೊರತು ಇನ್ನೇನೂ ಇಲ್ಲ. ಆದ್ದರಿಂದ ತಹಸೀಲ್‌ದಾರರು ಅವರು ಕೇಳಿದ ತಕ್ಷಣ 75% ಆದರೂ ಕೊಡಿಸಿ ಕೊಟ್ಟು 25% ಡಿಸ್ಪ್ಯೂಟ್ ತೀರಿದ ಮೇಲೆ ಕೊಡಿಸುವ ಹಾಗೆ ಏರ್ಪಾಡು ಮಾಡಿ ಕೊಡಬೇಕು.

ಕ್ಲಾಸ್ 22 (3) ರಲ್ಲಿ ಟೆನೆಂಟು ಮೈನರ್ ಆಗಿದ್ದು ಅವನು physically or mentally disabled ಆಗಿದ್ದು ಅಥವಾ ಅವನು armed forceನಲ್ಲಿ ಇದ್ದರೆ ಸಬ್‌ಲೆಟ್ ಮಾಡಬಹುದು ಎಂದು ಇದೆ. ಲ್ಯಾಂಡ್‌ಲಾರ್ಡ್ ಹುಚ್ಚ, ಬೆಪ್ಪ, ಮೈನರ್ physically handicaped ಆದರೆ ಅದಕ್ಕೂ ಇದರಂತೆಯೇ ಅನ್ವಯಮಾಡಬೇಕಾಗುತ್ತದೆ. ಟೆಂಪರರಿ ಬೇಸಿಸ್ ಮೇಲೆ ಅವರು ಸರಿಹೋಗುವವರೆಗೂ ಲ್ಯಾಂಡ್‌ಲಾರ್ಡು ಕೂಡ ಬೇರೆಯವರಿಗೆ ಕೊಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು.

ಕ್ಲಾಜ್ 39ರಲ್ಲಿ ಲ್ಯಾಂಡ್‌ಲಾರ್ಡ್ ಜಮೀನು ಮಾರಬೇಕಾದ ಸಂದರ್ಭದಲ್ಲಿ ಟೆನೆಂಟಿಗೇ ಕೊಡಬೇಕೆಂದು ಇದೆ. ಅದಕ್ಕೆ ಅವನು ಎರಡು ತಿಂಗಳ ಅವಧಿಯಲ್ಲಿ ವಾಪಸನ್ನು ಕಾಗದ ಬರೆಯಬಹುದು. ಅಷ್ಟು ಟೈಂ ಕೊಡಬೇಕೆಂದು ಇದೆ. ಇದು ತುಂಬಾ ದಿವಸವಾಗುತ್ತದೆ. ಆದ್ದರಿಂದ ಒಂದು ಫಾರ್ಟನೈಟ್ ಟೈಂ ಕೊಡಬೇಕೆಂದು ಹೇಳುತ್ತೇನೆ. compensation for improvement made by the tenant. ಲ್ಯಾಂಡ್‌ಲಾರ್ಡ್ ಪರ್ಮಿಷನ್ ತೆಗೆದು ಕೊಂಡು ಅವನ knowledgeಯಿಂದ ಮಾಡಿದ್ದಾದರೆ ಕಾಂಪೆನ್ಸೇಷನ್ ಕೊಡುವುದರಲ್ಲಿ ಏನೂ ಅಡ್ಡಿ ಇಲ್ಲ.

Compensation 47 (2) (*a*)ನಲ್ಲಿ fifteen times, the value in cash of one-fourth of the gross produce in the case of land possessing facilities for assured irrigation from a tank or river channel, less the land revenue of such land ಎಂದು ಇದೆ. ಇದಕ್ಕೆ ಮಾರ್ಕೆಟ್ ವ್ಯಾಲ್ಯು ಕೊಡಬೇಕೆಂದು ಹೇಳುತ್ತೇನೆ. ಒಂದು ವೇಳೆ ಹಾಗೆ ಆಗುವುದಿಲ್ಲವೆಂದರೆ 25 times of the 1/3 or 1/4th the gross produce ಎಂದು ಮಾಡಿದರೆ ಸರಿಯಾಗಬಹುದು ಎಂದು ಕಾಣುತ್ತದೆ.

ಕ್ಲಾಜ್ 51ರಲ್ಲಿ mode of payment of compensation ಇದೆ. ಕ್ಯಾಷ್ ಕೊಟ್ಟರೆ ಆ ಪಾಪಿ ಲ್ಯಾಂಡ್‌ಲಾರ್ಡು ಬೇರೆ ಏನಾದರೂ ವ್ಯವಹಾರ, ವ್ಯವಸ್ಥೆ ಮಾಡಿಕೊಂಡು ಜೀವನ ಮಾಡಬಹುದು. ಆದ್ದರಿಂದ ಅವನಿಗೆ ಲಂಪ್‌ಸಂ ಕ್ಯಾಷ್ ಕೊಟ್ಟರೆ ಒಳ್ಳೆಯದು ಅವನು ಬದುಕುತ್ತಾನೆ ಎಂದು ನನಗೆ ತೋರುತ್ತದೆ.

The amount payable under the bonds may be paid in such number of instalments not exceeding twenty as may be prescribed ಎಂದು ಇದೆ. ಇನ್‌ಸ್ಟಾಲ್‌ಮೆಂಟ್ ಕೊಡುವವರೆಗೂ ರೆಂಟ್ ಕೊಡುತ್ತಾ ಇರಬೇಕು. ಇಲ್ಲದೇ ಇದ್ದರೆ ಈಗ ಇನಾಂದಾರರು, ಜಮೀನ್‌ದಾರರಿಗೆ ಆಗುತ್ತಿದೆಯಲ್ಲಾ ಹಾಗೆ ಅತ್ತಲಾಗಿ ಜಮೀನೂ ಹೋಗುತ್ತದೆ, ಹಣವೂ ಇಲ್ಲ. ನಾವು ಹಾಕಿಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಪೂರ್ಣವಾಗಿ ಹಣ ಸಂದಾಯವಾಗುವವರೆಗೂ ರೆಂಟ್ ಆದರೂ ಕೊಡುತ್ತಾ ಇರಬೇಕೆಂದು ಹೇಳುತ್ತೇನೆ.

63 ceiling ಇದರ ವಿಚಾರವಾಗಿ ಮತ್ತೆ ಹೇಳುತ್ತಾ ಇದ್ದೇನೆ ಅಗ್ರಿಕಲ್ಚರಿಸ್ಟ್ ಆಗಿ ಇದೇ ಉದ್ಯೋಗವಾಗಿರುವವರಿಗೆ-ಟೆನೆಂಟ್‌ಗಳಿಗೆ ಪ್ರೊಟೆಕ್ಷನ್ ಕೊಡಿ ಯಾರೂ ಬೇಡವೆನ್ನುವುದಿಲ್ಲ. ಆದರೆ ಸೈಂಟಿಸ್ಟ್ ಆಗಿರುವವರನ್ನೂ ಲ್ಯಾಬೊರೇಟರಿ ಚಿಕ್ಕದಾಗಿ ಇಟ್ಟುಕೊಳ್ಳಿ, ಅನ್ನುವ ಹಾಗೆ ಆಫೀಸನ್ನು ಚಿಕ್ಕದಾಗಿ ಇಟ್ಟುಕೊಳ್ಳಿ ಅನ್ನುವ ಹಾಗೆ, ಡಾಕ್ಟರಿಗೆ ಆಸ್ಪತ್ರೆ ಚಿಕ್ಕದಾಗಿ ಮಾಡಿ ಕೊಳ್ಳಿ ಎನ್ನುವ ಹಾಗೆ ನೀವೂ ಚಿಕ್ಕ ಚಿಕ್ಕ ಭೂಮಿ ಇಟ್ಟುಕೊಳ್ಳಿ ಎಂದು ಹೇಳಿದರೆ ಅದರಲ್ಲಿ ಅರ್ಥವಿಲ್ಲ ಎಂದು ಹೇಳುತ್ತೇನೆ. ಏಕೆಂದರೆ ಭೂಮಿಯೇ ಅವನ ಲ್ಯಾಬೊರೇಟರಿ. ಎಲ್ಲಾ ತರಹದ ರಿಸರ್ಚು, ಏನು ಮಾಡಬೇಕಾದರೂ ಅವನಿಗೆ ಭೂಮಿಯೇ ಆಗಿರುವುದರಿಂದ ಅದೇ ಉದ್ಯೋಗವಾಗಿರುವವನಿಗೆ ನೀವೂ ಸೀಲಿಂಗ್ ಹಾಕುತ್ತೇವೆ ಎನ್ನುವ ಆ ಶಬ್ದವೇ ಸರಿ ಹೋಗುತ್ತಿಲ್ಲ. ಆದ್ದರಿಂದ ಸೀಲಿಂಗ್ ಹಾಕಕೂಡದು ಒಂದು ವೇಳೆ ಹಾಕಲೇಬೇಕು ಎಂದರೆ ಪಕ್ಕದ ಸ್ಟೇಟ್‌ನಲ್ಲಿ ಏನಿದೆ ಅದರಂತೆ ಮಾಡಬೇಕೇ ಹೊರತು ಒಂದು ಸಾರಿ ಮದರಾಸಿನ ಹಾಗೆ ಮಾಡುತ್ತೇವೆ ಎನ್ನುವುದು ಮತ್ತೊಂದು ಸಾರಿ ಬೊಂಬಾಯಿನ ಹಾಗೆ ಮಾಡುತ್ತೇವೆ ಎನ್ನುವುದು ಇನ್ನೊಂದು ಸಾರಿ ಪ್ಲಾನಿಂಗ್ ಕಮಿಷನ್ ಅವರ ಹಾಗೆ ಮಾಡುತ್ತೇವೆ ಎಂದು ಹೇಳುವುದು. ಈ ರೀತಿ ಒಂದು ಹೊಸ ವಿದ್ಯೆ ಕಂಡು ಹಿಡಿಯುತ್ತೀರಿ. ಇದು ಸರಿಯಲ್ಲ. ಆದ್ದರಿಂದ ಇದು ಕೊನೆಪಕ್ಷ 50 ಸ್ಟ್ಯಾಂಡರ್ಡ್ ಎಕರ್ಸ್ ಆದರೂ ಇರಬೇಕೆಂದು ಹೇಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

63 (2) (*e*)ನಲ್ಲಿ ತೆಂಗು ಮತ್ತು ಅಡಿಕೆ ತೋಟ ಸಹ ಸೇರುತ್ತದೆ ಎಂದು ನನಗಂತೂ ಸಂಪೂರ್ಣವಾದ ನಂಬಿಕೆ ಇದೆ. Heavy Investment ಎಂದರೆ ಒಂದು ಕೊಡ ಹಣ ತೆಗೆದುಕೊಂಡು ಭೂಮಿಯಲ್ಲಿ ಹೂತು ಇಡುವುದಲ್ಲ. 12 ವರ್ಷಗಳ ಕಾಲ ತಪಸ್ಸು ಮಾಡಿ ತೆಂಗಿನ ಗಿಡ, ಅಡಿಕೆ ಗಿಡ ಸಾಕಿ ಈಗ 4–4 ಗಿಡ ಹಂಚಿಕೊಳ್ಳಿ ಎಂದರೆ ಅದರಲ್ಲಿ ಅರ್ಥವಿಲ್ಲ. ಇದನ್ನು ಸೀಲಿಂಗ್ ಪರಿಮಿತಿಯಿಂದ ತೆಗೆದು ಪ್ಲಾಂಟೇಷನ್ ಕ್ರಾಪ್ ಜೊತೆಯಲ್ಲಿ ಸೇರಿಸಬೇಕು.

89ರಲ್ಲಿ co-operative farm ವಿಷಯ ಇದೆ. ಕುರಿ ಕಾಯುವ ತೋಳದ ರೆಕ್ಕಾಚಾರ ಇದು. ಏಕೆಂದರೆ ಒಂದು ಮನೆಯಲ್ಲಿ ಅಣ್ಣತಮ್ಮಂದಿರು, ಮೊಮ್ಮಕ್ಕಳು, ಮರಿಮಕ್ಕಳು ಇರುತ್ತಾರೆ. ಆ ಸಂಸಾರವನ್ನು ಒಡೆದು ಚಿಕ್ಕ ಚೂರುಗಳಾಗಿ ಮಾಡಿ, ಇಲ್ಲಿ ಹತ್ತಾರು ಜನರನ್ನು ಸೇರಿಸಿ ಕೋ-ಆಪರೇಟಿವ್ ಫಾರಂ ಮಾಡುವ ಸಾಹಸ ಮಾಡುತ್ತಾ ಇದ್ದೀರಿ. ಕೋ-ಆಪರೇಟಿವ್ ಸಿಸ್ಟಂನಿಂದ ದೇಶದಲ್ಲಿ ಆಗುತ್ತಿರುವ ಉಪಕಾರ ಸಾಕಾದಷ್ಟು ನೋಡಿದ್ದೇನೆ. ನಮ್ಮ ದೇಶ ಇಷ್ಟು dishonest, lazy ಆಗಿರುವದೇಶ. ಇಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಎಂದೆಂದಿಗೂ ಜಯಪ್ರದವಾಗಿ ಆಗುವುದಕ್ಕೆ ಖಂಡಿತವಾಗಿಯೂ ಸಾಧ್ಯವೇ ಇಲ್ಲ. ಯಾವ ದೇಶದಲ್ಲೇ ಆದರೂ cradle ನಿಂದ Grave ನವರೆಗೂ ಪ್ರೊಟೆಕ್ಷನ್ ಇವೆ. ನಮ್ಮ ದೇಶದಲ್ಲಿ ಏನಿದೆ? ಯಾವುದೂ ಇಲ್ಲ. ಯಾವುದಕ್ಕೂ ಸೆಕ್ಯೂರಿಟಿ, ಸೇಫ್ಟಿ ಏನೇನೂ ಇಲ್ಲ. ಇಂಥಾ ದೇಶದಲ್ಲಿ ಕ್ರೆಡಿಟ್ ಸೊಸೈಟಿ ಆಗಲೀ, ಇಂಡಸ್ಟ್ರಿಯಲ್ ಸೊಸೈಟಿ ಆಗಲೀ ಅಥವಾ ಈಗ ನಮಗೆ ಗೊತ್ತಿರುವಂತೆ ಖಾದಿ ಇಂಡಸ್ಟ್ರೀ ಸೊಸೈಟಿಯನ್ನೇ ತೆಗೆದುಕೊಳ್ಳಿ, 10-15 ಸಾವಿರ ರೂಪಾಯಿ ನುಂಗಿಹಾಕಿ, ಮುಂದೇ ಅವರೇ ಶಾಸಕರಾಗಿ ಬರುತ್ತಾರೆ. ಎಷ್ಟು ದೂರುಗಳನ್ನು ಕೊಟ್ಟರೂ ಹೇಳುವವರಿಲ್ಲ, ಕೇಳುವವರಿಲ್ಲ. ಹೀಗಾಗಿ ಬಿಟ್ಟಿದೆ. ಹೀಗಿರುವಾಗ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತೇವೆ ಎನ್ನುವುದನ್ನು ಎಂದೆಂದಿಗೂ ಕನಸಿನಲ್ಲೂ ನೆನೆಸುವುದಕ್ಕಾಗುವುದಿಲ್ಲ ಎಂದು ನನ್ನ ಭಾವನೆ.

101ರಲ್ಲಿ......his heirs shall be deemed to have become members of the co-operative farm ಹೆಣ್ಣು ಮಕ್ಕಳಿಗಿದರೆ ಕೈಬಿಂದಾಗಿಯೇ ಹೋಯಿತು. ನೂರೆಂಟು ಭಾಷೆಗಳ ಗೊಂದಲ, ನೂರೆಂಟು ತರಹ ನಡವಳಿಕೆ ಈ ಮಟ್ಟದಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಜಯಪ್ರದವಾಗುವುದು ಬಹಳ ಸಂಶಯ.

2-30 P.M.

ಆ ಮೇಲೆ ಈ ಮಸೂದೆಯಲ್ಲಿ ಇನ್ನೊಂದು ತಮಾಷೆ ಕ್ಲಾಜ್ ಇದೆ. ಸರಕಾರದ ಹತ್ತಿರವಿರುವ ಭೂಮಿಗಳಿಗೆ ಮಾತ್ರ ನಿಯಮಗಳು ಅನ್ವಯಿಸಕೂಡದು ಎಂದಿದೆ. ಈ ರೀತಿ ಚೆನ್ನಾಗಿ ಸಂರಕ್ಷಣೆ ತೆಗೆದುಕೊಂಡಿದ್ದಾರೆ. ಆದರೆ ನಾನು ಮಂತ್ರಿಗಳನ್ನು ಕೇಳುತ್ತೇನೆ. ಸರಕಾರದ ಹತ್ತಿರ ಎಷ್ಟೆಷ್ಟು ಭೂಮಿಯಿದೆ? ಫಾರೆಸ್ಟ್ ಲ್ಯಾಂಡ್ ಎಷ್ಟು ಎಕರೆ ಇದೆ, ಎಕ್ಸ್‌ಪ್ರೈಜ್ ಲ್ಯಾಂಡ್ ಎಷ್ಟು ಎಕರೆ ಇದೆ ಎಂದು ಕೇಳಿದರೆ ಅದು ಗೊತ್ತಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಯಾವ ಯಾವ ಪ್ರಕಾರದ್ದು ಎಷ್ಟು ಎಕರೆ ಭೂಮಿಯಿದೆ ಎಂಬುದನ್ನು ಮಂತ್ರಿಗಳು ತಿಳಿಸಬೇಕು. ಜನಗಳು ಮಾತ್ರ ದುಡ್ಡು ಖರ್ಚು ಮಾಡಿ ಭೂಮಿಯನ್ನು ಹದಗೊಳಿಸಿ ಸಾಗುವಳಿ ಮಾಡುವಂಥ ಜಮೀನನ್ನು ತೆಗೆದುಕೊಳ್ಳಲು ಅನುಕೂಲ ಮಾಡಿಕೊಂಡಿದ್ದಾರೆ. ನಾನು ಹೇಳುವುದು ಏನೆಂದರೆ ಸರಕಾರವೇ ದೊಡ್ಡ ಲ್ಯಾಂಡ್‌ಲಾರ್ಡ್ ಆಗಿದೆ. ಅವರ ಹತ್ತಿರವಿರುವ ಭೂಮಿಯನ್ನು ಮೊದಲು ಜಮೀನು ಇಲ್ಲದವರಿಗೆ ಹಂಚಿ ಆಮೇಲೆ ಬಾಕಿ ಭೂಮಿಯ ಬಗ್ಗೆ ನೋಡಬಹುದು. ಕ್ಲಾಜ್ 102 ಇಟ್ಟುಕೊಂಡು ಇಷ್ಟು ಸುಲಭವಾಗಿ ಸಂರಕ್ಷಣೆ ತೆಗೆದುಕೊಳ್ಳುವುದು ನಿಜವಾಗಿಯೂ ನಾಚಿಕೆಗೇಡು ಎಂದು ಹೇಳಬೇಕಾಗುತ್ತದೆ. ಆದುದರಿಂದ ಮೊದಲು ಸರಕಾರದ ಹತ್ತಿರ

ಇರುವ ಜಮೀನನ್ನು ಜಮೀನು ಇಲ್ಲದವರಿಗೆ ಹಂಚುವುದನ್ನು ಹಂಚಿ ಆಮೇಲೆ ಜನಗಳ ಭೂಮಿಗೆ ಕೈಹಾಕಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ನಾನು ಏನೇನೋ ಒಡ್ಡೊಡ್ಡಾಗಿ ಹೇಳಿರುವುದನ್ನು ತಪ್ಪಾಗಿ ತಿಳಿದುಕೊಳ್ಳಬಾರದು. ಮಾನ್ಯ ಮಂತ್ರಿಗಳಿಗೆ ನಿಜವಾಗಿಯೂ ನಾನು ವಂದಿಸುತ್ತೇನೆ.

ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಕೊನೆಯದಾಗಿ ಹೇಳಿರುವ ಹಾಗೆ ಅವರ ಮನಸ್ಸಿನಲ್ಲಿರುವ ಹಾಗೆ 'ಸರ್ವೇ ಜನಾಃ ಸುಖಿನೋ ಭವಂತು'' ಸರ್ವರೂ ಸುಖವಾಗಿರಲಿ ಎಂಬ ಉಚ್ಚ ಧ್ಯೇಯಕ್ಕೆ ಅನುಗುಣವಾಗಿ ಸರಿಯಾದ ರೀತಿಯಲ್ಲಿ ತಿದ್ದುಪಡಿಗಳನ್ನು ಮಾಡಿ, ಸ್ತ್ರೀ ಧನ, ಅಪದ್ಧನ, ಮಾನಧನ ಇವುಗಳಿಗೆ ಸರಿಯಾದ ರಕ್ಷಣೆ ಕೊಟ್ಟು ಈ ಮಸೂದೆಯನ್ನು ಪಾಸ್ ಮಾಡಬೇಕು. ಎಂದು ಹೇಳುತ್ತೇನೆ. ನನಗೆ ಮಾತನಾಡಲು ಜಾಸ್ತಿ ಹೊತ್ತು ಕೊಟ್ಟಿರುವದರಿಂದ ಅಧ್ಯಕ್ಷರನ್ನು ವಂದಿಸಿ ನಾನು ಭಾಷಣ ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಈ ಭೂಸುಧಾರಣಾ ವಿಧೇಯಕದ ಮೂಲ ತತ್ವವನ್ನು ಒಪ್ಪಿಕೊಂಡು ಸಂಯುಕ್ತ ಪರಿಶೀಲನಾ ಸಮಿತಿಯ ವರದಿಯ ಬಗ್ಗೆ ಕೆಲವು ಸಲಹೆ ಮಾಡುತ್ತೇನೆ. ಅರ್ಧನಾರೀಶ್ವರ ತತ್ವದಿಂದ ಕೂಡಿರುವ, ಹರಿಹರೇಶ್ವರನಿಗೆ ಪ್ರೀತಿಯಾಗಬಲ್ಲ ಈ ಭೂಸುಧಾರಣಾ ಮಸೂದೆ ಮಂಡಿಸಿರುವ ಮಲೆನಾಡಿನ ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸಲು ಸಂಕೋಚಪಟ್ಟರೂ ಶ್ಲಾಘಿಸಲು ಹಿಂಜರಿಯಲಾರೆ. ಕ್ರಾಂತಿಕಾರಕ ಅರ್ಥಾತ್ ಪ್ರಗತಿಪರವಾದ ಲೋಕಕಲ್ಯಾಣ ತತ್ವಗಳನ್ನು ಜಾರಿಗೆ ತರಬೇಕಾದರೆ, ಭೀಮಸೇನನ ದಿಟ್ಟತೆ, ಎದೆಗಾರಿಕೆ ಇರಬೇಕು. ಕ್ರಾಂತಿಕಾರಕ ಬದಲಾವಣೆ ನಾವು ಮಾತನಾಡುವಷ್ಟು ಸುಲಭವಲ್ಲ.

ದೈವವನು ಲಕ್ಷಿಸದೆ, ವೇದಗಳ ಲೆಕ್ಕಿಸದೆ।
ಕಾವ್ಯಗಳನಾಲಿಸದೆ। ಗ್ರಂಥಗಳ ಸ್ಪರ್ಶಿಸದೆ।
ನೈಜ ತತ್ವವ ಜಗದಿ ಬಿತ್ತುವಳು ಕ್ರಾಂತಿ॥
ನರಪತಿಗೆ ಭಯಪಡದೆ ಸಿರಿವರನ ಲೆಕ್ಕಿಸದೆ।
ಹಿರಿದ ಖಡ್ಗದ ಮುಂದೆ ಹೊಡೆವ ತೋಫಿನ ಎದುರು!
ವೀರ ವನಿತೆಯ ಕರದಿ ಚರಿಸುವಳು ಕ್ರಾಂತಿ॥

ಎಂದು ಕ್ರಾಂತಿಕಾರಕ ಬದಲಾವಣೆಯ ಬಗ್ಗೆ ಕ್ರಾಂತಿ ಪುರುಷರು ಹೇಳಿದ್ದಾರೆ. ಈ ಮಸೂದೆಯಲ್ಲಿ—ದಯಾ ದಾಕ್ಷಿಣ್ಯ ಸಂಕೋಚ ಸಂದೇಹಗಳೇ ಎದ್ದು ಕಾಣುತ್ತವೆ. ಇಷ್ಟೆಲ್ಲಾ ಕುಂದುಕೊರತೆಗಳಿದ್ದರೂ ಭಗೀರಥ ಪ್ರಯತ್ನದಿಂದ ಮಸೂದೆ ಮಂಡಿಸಿರುವ ಮಾನ್ಯ ರೆವಿನ್ಯೂ ಮಂತ್ರಿಗಳು ಶ್ಲಾಘನೀಯರೇ ಸರಿ.

ಮಸೂದೆಯಲ್ಲಿ ಎದ್ದುಕಾಣುವ ಅಂಶವೆಂದರೆ ಜಮೀನಿನ ಪರಮಾವಧಿ ವಿಸ್ತೀರ್ಣದ ನಿರ್ಣಯ. ಇದೇ ಈ ಮಸೂದೆಯ ಜೀವಾಳ. ಈ ಜೀವಾಳ ನಿರ್ಣಯ ಪ್ರಶ್ನೆಯನ್ನು ಜನತೆ ಮೆಚ್ಚುವಂತೆ ತೀರ್ಮಾನಿಸಿಲ್ಲವೆಂದು ಹೇಳಬೇಕಾಗಿದೆ. ಜಮೀನುಗಳ ವರ್ಗೀಕರಣ ಏಳು ಭಾಗ ಮಾಡಿದ್ದಾರೆ. ಏಳು-ಬೀಳು ಎಂಬಂತೆ ಈ ನಿರ್ಣಯದಲ್ಲಿ ಅನುಕೂಲಸಿಂಧು ಕಾಣುತ್ತದೆ. ಪರಮಾವಧಿ 5 ಜನರುಳ್ಳ ಒಂದು ಕುಟುಂಬದ ವಿಸ್ತೀರ್ಣ 27 ಎಕರೆ ಎಂದಿದೆ. ಇಪ್ಪತ್ತೇಳು ಎಕರೆ ಎಂತಹ ಭೂಮಿ? ತರಿಯೋ, ಬಾಗಾಯತೋ, ಖುಷ್ಕಿಯೋ ಎಂಬುದರ ಕರಾರುವಾಕ್ ನಿರ್ಣಯವಿಲ್ಲ. ಒಂದನೇ ವರ್ಗ, ಎರಡನೇ ವರ್ಗ, ಮೂರನೇ ವರ್ಗ ಹೀಗೆ ಜಮೀನಿನ ಗುಣ ಸ್ವಭಾವಗಳನ್ನು ಏಳು ರೀತಿಯಾಗಿ ವರ್ಗೀಕರಣ ಮಾಡಿರುವುದು ''ರೋಗಿ ಬಯಸಿದ್ದೂ ಹಾಲೋಗರ ವೈದ್ಯ ಹೇಳಿದ್ದೂ ಹಾಲೋಗರ'' ಎಂಬಂತಾಗಿ ಪಟ್ಟಭದ್ರ ಹಿತರಕ್ಷಣೆಗೆ ತುಂಬಾ ಅನುಕೂಲ ಒದಗಿಸಿ ಕೊಡಲಾಗಿದೆ. 4ನೇ ತರಗತಿಯ ತರಿ, ಅಥವಾ ಬಾಗಾಯತು, 54

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸಾಮಾನ್ಯ ಎಕರೆ ಪರಮಾವಧಿ ವಿಸ್ತೀರ್ಣವಾಗಿದೆ. 35 ಅಂಗುಲ ಮಳೆ ಬರುವ ಕಡೆ 108 ಎಕರೆ, 25 ಅಂಗುಲ ಮಳೆ ಬೀಳುವ ಕಡೆ 210 ಎಕರೆ ಪರಮಾವಧಿ ವಿಸ್ತೀರ್ಣವಾಗಿದೆ. ಒಂದು ಕುಟುಂಬದಲ್ಲಿ 10 ಮಂದಿ ಮೇಲ್ಪಟ್ಟಿದ್ದರೆ ಈ ವರ್ಗೀಕರಣ ಎರಡರಷ್ಟು ಜಮೀನನ್ನು ಹೊಂದಲು ಹಕ್ಕು ದೊರೆಯುತ್ತದೆ. ಈ ನಿರ್ಣಯಕ್ಕಿಂತಲೂ ಹೆಚ್ಚಿನ ಜಮೀನನ್ನು ರಾಜ ಮಹಾರಾಜರು ಅಪೇಕ್ಷಿಸಬಹುದು. ಜನ ಸಾಮಾನ್ಯರ ದೃಷ್ಟಿಯಿಂದ ಈ ವರ್ಗೀಕರಣ ರೀತಿ ಜಮೀನು ಹೊಂದಿರುವವರೆಲ್ಲ ಭೂಸ್ವಾಮಿಗಳೇ ಆಗುತ್ತಾರೆ.

ಗೇಣಿಗೆ ಕೊಡಲ್ಪಟ್ಟಿರುವ ಜಮೀನು 61 ಲಕ್ಷ ಎಕರೆ ಎಂದು ಹೇಳಿ 30 ಲಕ್ಷ ಎಕರೆ ಗೇಣಿದಾರರಿಗೆ ಉಳಿಯುವುದೆಂದು ಮಾನ್ಯ ರೆವಿನ್ಯೂ ಸಚಿವರು ಹೇಳಿದ್ದಾರೆ. ಇದು ನಿಜವಾದರೆ ರೆವಿನ್ಯೂ ಮಂತ್ರಿಗಳು ಅಭಿನಂದನೀಯರೇ ಸರಿ. ಭೂಸುಧಾರಣೆ ಜಾರಿಗೆ ಬರುತ್ತದೆಂಬ ವದಂತಿಯಿಂದ ಕಳೆದ ನಾಲ್ಕೈದು ವರ್ಷಗಳಿಂದಲೂ ಭಾಗ ವಿಭಾಗ ಮಾಡಿಕೊಂಡ ಜಮೀನು, ಸ್ವಂತ ವ್ಯವಸಾಯಗಾರರಾಗಿ ಪರಿವರ್ತನೆ ಹೊಂದಿದ ಜಮೀನು, ಕಾನೂನು ವ್ಯಾಪ್ತಿಗೆ ಸಿಗದಂತೆ ಕಾನೂನು ರೀತ್ಯ ಸರಿಪಡಿಸಿಕೊಂಡಿರುವ ಜಮೀನು ಇವೆಲ್ಲಾ ಹೋಗಲಾಗಿ, ಗೇಣಿದಾರರಿಗೆ ಉಳಿಯುವದೆಷ್ಟು? ಹಂಚಿಕೆಗೆ ಉಳಿಯುವದೆಷ್ಟು? ಎಂಬುದನ್ನು ಹೇಳಬಲ್ಲಿರಾ, ನೀವು ಹೇಳಿದಷ್ಟು ಲಕ್ಷ ಎಕರೆ ಭೂಮಿ ಉಳಿಯಲಾರದು ಎಂದು ನಾನು ಭಾವಿಸುತ್ತೇನೆ. ರವೆ ಉಂಡೆಗೆ ಕ್ಷಯ ಬಂದಂತೆ. ಭೂಸುಧಾರಣಾ ತತ್ವಕ್ಕೂ ಕ್ಷಯ ಬಂದಿದೆ. ರವೆಉಂಡೆಗೆ ಕ್ಷಯ ಬಂದ ಕಥೆ ಹೇಳುತ್ತೇನೆ. ಒಬ್ಬ ಅಮಲ್ದಾರರಿದ್ದರು. ಅವರ ಹೆಂಡತಿ ತೌರು ಮನೆಗೆ ಹೋಗುವಾಗ ಯಜಮಾನರಿಗೆ ತಿನ್ನಲು ರವೆಉಂಡೆ ಮಾಡಿಟ್ಟು ಹೋಗಿದ್ದಳು. ಅಮಲ್ದಾರರ ಅಡಿಗೆ ಭಟ್ಟರಿಗೆ ರವೆಉಂಡೆ ತಿನ್ನುವ ಚಪಲ. ಅಮಲ್ದಾರರಿಗೆ ದಿನಾಲು ಒಂದು ಉಂಡೆ ಕೊಟ್ಟು ಉಳಿದ ಉಂಡೆಗಳ ಲೆಕ್ಕ ಸರಿಯಾಗಿರಬೇಕು ತಾನೂ ರವೆಉಂಡೆ ತಿನ್ನಬೇಕು. ಇದಕ್ಕೊಂದು ಉಪಾಯ ಮಾಡಿದ. ಪ್ರತಿಯೊಂದು ರವೆ ಉಂಡೆಯನ್ನು ಕೈಯಲ್ಲಿ ಸವರುವುದು ಪುಡಿ ಉದುರಿಸುವುದು ತಿನ್ನುವುದು ಹೀಗೆ ಮಾಡುತ್ತಾ ಬಂದನು. ದಿನೇ ದಿನೇ ಸಣ್ಣ ಪ್ರಮಾಣದ ರವೆಉಂಡೆ ಕೊಡುವುದನ್ನು ನೋಡಿ, ಉಂಡೆ ಯಾಕೆ ಸಣ್ಣವಾಗಿವೆ ಎಂದು ಕೇಳಿದ್ದಕ್ಕೆ ಅಡಿಗೆ ಭಟ್ಟ "ಕ್ಷಯ ಬಂದಿರಬೇಕು ಸ್ವಾಮಿ" ಎಂದನಂತೆ. ಹೀಗೆ ಭೂಮಿಯೇನೋ ಇದೆ. ಭೂಸುಧಾರಣಾ ವಿಷಯಕ್ಕೆ ಎಟುಕದಂತೆ ಕ್ಷಯ ಬಂದಿದೆ. ನೀವು ವಿಷಯೋಪಚಾರ ಮಾಡುವದರೊಳಗೆ ಕಾನೂನು ಪ್ರಕಾರ ಭೂಮಿಗಳು ಸತ್ತುಹೋಗುತ್ತವೆ. ಆಮೇಲೆ ನಿಮಗೆ ಹಂಚಿಕೆಗೆ ಮತ್ತು ಗೇಣಿದಾರರಿಗೆ ನೀವು ನಿರೀಕ್ಷಿಸಿದಷ್ಟು ಎಕರೆ ಭೂಮಿ ಸಿಗಲಾರದು ಎಂದು ನಾನು ಭಾವಿಸಿದ್ದೇನೆ. ಇದಕ್ಕೆ ಚತ್ತಿಯವರ ಸಮಿತಿ ಗೇಣಿಗೆ, ಸಂಯುಕ್ತ ಸಲಹಾ ಸಮಿತಿ ಗೇಣಿಗೆ, ರೆವಿನ್ಯೂ ಮಂತ್ರಿಗಳ ಬೋಣಿಗೆಯಾಗಿ ಜನತೆಗೆ ದೊರೆಯುವ ಈ ಕಿರುಗಾಣಿಕೆಗೆ ಇಷ್ಟೆಲ್ಲಾ ರಾಮಾಯಣ ಏಕೆ ಬೇಕಿತ್ತೋ ಗೊತ್ತಿಲ್ಲ. ಇದೆಲ್ಲ ಮಾಡುವದರ ಬದಲು ವಿನೋಬಾರವರನ್ನು ಒಂದೆರಡು ವರ್ಷ ಇಲ್ಲೇ ಇಟ್ಟುಕೊಂಡಿದ್ದರೆ ಇದಕ್ಕಿಂತಲೂ ಹೆಚ್ಚಿನ ಪರಿಣಾಮಕಾರಿಯಾಗುವಂಥ ಕೆಲಸ ನಡೆಯುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ ಎಂದು ನನ್ನ ಅಭಿಪ್ರಾಯ.

ಇಷ್ಟೆಲ್ಲಾ ರಾಮಾಯಣ ಮಾಡಿ ಈ ಮಸೂದೆಯಿಂದ ಭೂಹೀನರಿಗೆ ಹಂಚಲು ದೊರೆಯುವುದು ಎರಡು ಲಕ್ಷ ಎಕರೆಗಳು ಮಾತ್ರ ಇಲಿಯನ್ನು ಹುಡುಕಲು ಪರ್ವತವನ್ನು ಬಗೆದಂತಾಗಿದೆ. ನೀವು ಮಾಡಿರುವ ಕೆಲಸ ಇದಕ್ಕೆಮಾಡಿದ ಖರ್ಚು ಪ್ರಯತ್ನಗಳಲ್ಲಿ ಅರ್ಧದಷ್ಟನ್ನು ಮಾಡಿದ್ದರೆ ದಾನರೂಪವಾಗಿಯೇ ಇದಕ್ಕಿಂತಲೂ ಹೆಚ್ಚಿಗೆ ಜಮೀನು ದೊರೆಯುತ್ತಿತ್ತು ಇಲ್ಲಿರುವ ನಮ್ಮ ಸಹೋದರಿಯರಿಂದ ಸಿಕ್ಕುತ್ತಿತ್ತು ಜಮೀನನ್ನೂ ಬೇಡಿದವರಿಗೆ ಅವರು ಕೊಡುತ್ತಿದ್ದಾರೆ.

ಒಂದು ಸಣ್ಣ ಕುಟುಂಬಕ್ಕೆ ಪರಮಾವಧಿ ವಿಸ್ತೀರ್ಣ 27 ಎಕರೆ ಜಾಸ್ತಿ ಎಂದು ಕೆಲವರು ಹೇಳಿದ್ದಾರೆ ಇದು ತುಂಬಾ ಜಾಸ್ತಿ ಎಂದೇ ಹೇಳಬೇಕು ಇದನ್ನೂ 20 ಎಕರೆಗೆ ನಿಗದಿಮಾಡಿದರೆ ಇನ್ನೂ

ಹೆಚ್ಚು ಜಮೀನು ಸಹಸ್ರಾರು ಎಕರೆಗಳು ಹಂಚಿಕೆಗೆ ದೊರೆಯುತ್ತದೆ. ಈ ಬಗ್ಗೆ ಕೊನೆ ನಿರ್ಣಯಕ್ಕೆ ಮುಂಚೆ ಮತ್ತೊಮ್ಮೆ ಯೋಚಿಸುವುದು ಸೂಕ್ತವೆಂದು ನನ್ನ ಅಭಿಪ್ರಾಯ.

ಹಾಲಿ ಮಂಡಿಸಿರುವಂಥ ಭೂಸುಧಾರಣಾ ಮಸೂದೆಯಲ್ಲಿ ಎದ್ದು ಕಾಣುವಂಥ ಒಂದು ನ್ಯೂನತೆ ಇದೆ. ಇದು ನಿಜವಾಗಿಯೂ ಪ್ರತ್ಯಕ್ಷ ಪಕ್ಷಪಾತವಾಗಿದೆ. ಕಾಫಿ, ಟೀ, ಏಲಕ್ಕಿ ತೋಟಗಳಿಗೆ ವಿನಾಯತಿಯನ್ನು ತೋರಿಸಿರುವಂಥ ಮಸೂದೆ ಧಾರ್ಮಿಕ ಸಂಸ್ಥೆಗಳಬಗ್ಗೆ ದ್ವೇಷಮನೋ ಭಾವನೆ ತೋರಿಸಿದೆ ಕಾಫಿ, ಟೀ, ಏಲಕ್ಕಿ ತೋಟಗಳಿಗೆ ತೋರಿಸಿರುವ ವಿನಾಯಿತಿ ಎರಡು ಲಕ್ಷ ಹನ್ನೆರಡು ಸಾವಿರದ ಐನೂರು ಎಕರೆಗಳು ವೈಯಕ್ತಿಕ ಪಟ್ಟಭದ್ರ ಹಿತಗಳಿಗೆ ರಿಯಾಯಿತಿ ತೋರಿಸಿದ ಮಸೂದೆ. ದೇಶದ ಜನತೆಯ ವಿದ್ಯಾ ಸಂಸ್ಕೃತ ಧಾರ್ಮಿಕ ಮನೋಭಾವನೆಯನ್ನು ಬೆಳಸಿ ಸೇವೆ ಸಲ್ಲಿಸುವ ನಿಜವಾದ ಧಾರ್ಮಿಕ ಸಂಸ್ಥೆಗಳನ್ನು ಕಡೆಗಾಣಿಸಿರುವುದು ಅಪಚಾರ ಮಾಡಿದಂತೆ ಎಂದು ವಿಷಾದದಿಂದ ಹೇಳಬೇಕಾಗಿದೆ ಬಹಳ ಹಿಂದಿನಿಂದ ಇಂದಿನವರೆಗೂ ಕೂಡ ಅನೇಕ ಧಾರ್ಮಿಕ ಸಂಸ್ಥೆಗಳು ಜನತೆಯ ವಿದ್ಯಾ ಸಂಸ್ಕೃತಿಗಳನ್ನು ರಕ್ಷಿಸಿಕೊಂಡು ಬಂದಿವೆ. ಕೆಲವು ಕಡೆ ಸರ್ಕಾರ ಮಾಡುವುದಕ್ಕಿಂತ ಹೆಚ್ಚಾಗಿ ಜನತೆಯ ಕಲ್ಯಾಣವನ್ನು ಸಾಧಿಸಿವೆ. ನಾವು ಒಂದು ಸ್ಕೂಲನ್ನು ಪಡೆಯಬೇಕಾದರೆ ನಾಲ್ಕು ವರ್ಷ ಕಣ್ಣೀರಿಡ ಬೇಕಾಯಿತು ಉಪವಾಸ ಮಾಡಬೇಕಾ ಯಿತು ಸರ್ಕಾರದವರು ದುಡ್ಡಿಲ್ಲವೆಂದು ಹೇಳುತ್ತಾರೆ ದೇಶದಲ್ಲಿನ ಲೆಕ್ಕ ತೆಗೆದುಕೊಂಡರೆ ಅರ್ಧಕ್ಕಿಂತ ಹೆಚ್ಚು ಶಾಲೆ, ಹಾಸ್ಟಲು ಮತ್ತು ಕಾಲೇಜುಗಳನ್ನು ನಡೆಸುತ್ತಿವೆ ಇವೊತ್ತು ಧಾರ್ಮಿಕ ಸಂಸ್ಥೆಗಳನ್ನು ಇವುಗಳನ್ನು ಬಿಟ್ಟು ಬಿಟ್ಟರೆ ಸರ್ಕಾರ ಇವುಗಳನ್ನು ನಡೆಸುವುದಕ್ಕಾ ಗುತ್ತದೆಯೇ ಅವರು ಒಂದೆರಡು ತಿಂಗಳಲ್ಲಿಯೇ ಬಾಗಿಲು ಮುಚ್ಚುತ್ತಾರೆಂದು ನನಗನ್ನಿಸುತ್ತದೆ ನಮ್ಮ ಪ್ರಾಚೀನ ಸಂಪತ್ತಾದ ಧಾರ್ಮಿಕರಿಗೇನೇ ಕೊಡಲಪೆಟ್ಟು ತಂದಿದೆ ಈ ಮಸೂದೆ. ಇಲ್ಲಿ ಇನ್ನೊಂದು ಸಣ್ಣ ಕಥೆ ಜ್ಞಾಪಕಕ್ಕೆ ಬರುತ್ತದೆ ಅಕ್ಬರ್, ಬೀರ ಬಲ್ಲರ ಮಧುರ ಬಾಂಧವ್ಯಗೊತ್ತೇ ಇದೆ ಬೀರ ಬಲನ ಮೇಲೆ ದ್ವೇಷವುಳ್ಳ ಒಬ್ಬ ಹಕೀಂ ಅಕ್ಬರನ ಒಂದು ಖಾಯಿಲೆಯನ್ನು ಗುಣ ಪಡಿ ಸಲು ಬೀರಬಲ್ಲನಿಂದ ಎತ್ತಿನ ಹಾಲನ್ನು ತರಿಸಿಕೊಳ್ಳಿ ಗುಣವಾಗುತ್ತದೆ ಎಂದು ತಿಳಿಸಿದನಂತೆ ಅಕ್ಬರನು ವಿಚಾರ ಮಾಡದೆ ಬೀರಬಲನನ್ನು ಕರೆದು ಒಂದು ವಾರದಲ್ಲಿ ಎತ್ತಿನ ಹಾಲನ್ನೂ ನೀನು ತಂದು ಕೊಡಬೇಕು ಇಲ್ಲದೆ ಇದ್ದರೆ ಶಿರಚ್ಛೇದನ ಮಾಡಿಸುತ್ತೇನೆ ಎಂದು ಕಟ್ಟಾಜ್ಞೆ ಮಾಡಿದ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಕಥೆಯನ್ನು ಪಾರ್ಟಿಮೀಟಿಂಗಿನಲ್ಲಿ ಹೇಳಿದ್ದೀರೋ ಇಲ್ಲವೋ?

ಶ್ರೀಮತಿ ನಾಗರತ್ನಮ್ಮ.—ಅಲ್ಲಿ ಹೇಳಿದರೆ ನಿಮಗೆ ಗೊತ್ತಾಗ ಬೇಕಲ್ಲ, ಅದಕ್ಕೋಸ್ಕರ ಇಲ್ಲಿ ಹೇಳುತ್ತಿದ್ದೇನೆ

ಬೀರಬಲ್ಲನಿಗೆ ದಿಕ್ಕೇ ತೋಚಲಿಲ್ಲ ತನ್ನ ತಂದೆಯ ವ್ಯಸನವನ್ನು ನೋಡಿದ ಆತನ ಮಗಳು ಪರಿಸ್ಥಿಯನ್ನರಿತು, ತಂದೆಯನ್ನು ಕುರಿತು ಇದಕ್ಕೆ ನೀನು ಚಿಂತಿಸ ಬೇಡವಪ್ಪ, ನಾನು ಎಲ್ಲವನ್ನೂ ಸರಿಪಡಿಸುತ್ತೇನೆಂದು ಹೇಳಿದಳು ಒಂದು ದಿನರಾತ್ರಿ ಅಕಬರನ್ನು ಮಲಗಿದ್ದ ಕೋಣೆಯ ಪಕ್ಕದಲ್ಲೇ ಹರಿಯುತ್ತಿದ್ದ ಯಮುನಾ ನದಿಗೆ ಅರ್ಧ ರಾತ್ರಿಯಲ್ಲಿ ಹೋಗಿ ಶಬ್ದವಾಗುವಂತೆ ಬಟ್ಟೆಗಳನ್ನು ಒಗೆ ಯಲಿಕ್ಕೆ ಹತ್ತಿದಳು ಅಕ್ಬರನಿಗೆ ನಿದ್ರಾಭಂಗವಾಗಿ ಕೋಪ ಬಂದು ಆಕೆಯನ್ನು ಕರಿಸಿಕೇಳಿದ್ದಕ್ಕೆ "ಹುಜೂರ್ ನನ್ನ ತಂದೆಗೆ ಹೆರಿಗೆಯಾಗಿದೆ, ತಾಯಿಗೆ ಖಾಯಿಲೆ, ಬಟ್ಟೆಗಳಿರಲಿಲ್ಲ, ಅದಕ್ಕಾಗಿ ಒಗೆ ಯುತ್ತಿದ್ದೇನೆ ಎಂದಳಂತೆ ಅಕ್ಬರನಿಗೆ ಸಿಟ್ಟುಬಂದು ನನು ಮಾತನಾಡುತ್ತಿರುವೆ ಎಂದು ಕೇಳಿದ್ದಕ್ಕೆ ಸ್ವಾಮಿ ತಾವು ಏಕೆ ಕೋಪ ಮಾಡುತ್ತೀರಿ, ಎತ್ತಿನ ಹಾಲು ದೊರೆಯುವುದಾದರೆ ನಮ್ಮ ತಂದೆಗೆ ಹೆರಿಗೆಯಾಗುವುದರಲ್ಲಿ ಏನಾಶ್ಚರ್ಯ ಎಂದು ದಿಟ್ಟತೆಯಿಂದ ಉತ್ತರ ಕೊಟ್ಟಳಂತೆ ಆಗ ಅಕ್ಬರನಿಗೆ ತನ್ನ ವಿಚಾರ ವಿಮರ್ಶೆಯಿಲ್ಲದೆ ಹೇಳಿದ ವಿಚಾರ ಜ್ಞಾಪಕಕ್ಕೆ ಬಂದು ಬೀರಬಲ್ಲನಿಗೆ

(ಶ್ರೀಮತಿ ನಾಗರತ್ನಮ್ಮ)

ವಿಧಿಸಿದ್ದ ಆಜ್ಞೆಯನು ವಾಪಸ್ಸು ತೆಗೆದುಕೊಂಡನಂತೆ ಇದರಂತೆಯೇ ವಿಚಾರ ವಿಮರ್ಶೆ ಇಲ್ಲದೆ ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿ ಕೊಡದೆ ಇರುವುದು ತುಂಬ ಅನ್ಯಾಯ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂಜಪ್ಪನವರಿಗೆ ಹೆರಿಗೆಯಾಯಿತು ಎಂದು ಯಾರಾದರೂ ಹೇಳಿದರೆ! (ನಗು)

ಶ್ರೀಮತಿ ನಾಗರತ್ನಮ್ಮ.—ಧಾರ್ಮಿಕ ಸಂಸ್ಥೆಗಳವರು ಹದ್ದು ಮೀರಿ ವರ್ತಿಸುತ್ತಿದ್ದರೆ ಅವರನ್ನು ಹದ್ದು ಬಸ್ತಿಗೆ ತರಲು ಸಾರ್ವಜನಿಕರಿಗೂ ಹಕ್ಕಿದೆ ಸರ್ಕಾರಕ್ಕೂ ಹಕ್ಕಿದೆ ಇರುವ ಅಲ್ಪ ಸ್ವಲ್ಪ ಧಾರ್ಮಿಕ ಸಂಸ್ಕೃತಿಗೂ ಕೊಡಲಿಪೆಟ್ಟು ಹಾಕಿದರೆ ನಮಗೆ ಉಳಿಯುವುದು ನಶ್ಯದ ಡಬ್ಬಿ ನಾಮದ ಬಿಲ್ಲೆ ಅಷ್ಟೆ ಪ್ರಯುಕ್ತ ಇದು ರಾಷ್ಟ್ರೀಯ ಪ್ರಶ್ನೆ ಇದನ್ನೂ ದೂರ ದೃಷ್ಟಿಯಿಂದ ಉದಾರತೆಯಿಂದ ವಿಮರ್ಶಿಸಿ ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿ ಕೊಡುವುದು ದೇಶದ ಹಿತ ದೃಷ್ಟಿಯಿಂದ ನಾನು ನಮ್ಮ ಮಾನ್ಯ ಸಚಿವರಲ್ಲಿ ಹೇಳಬಯಸುತ್ತೇನೆ.

ಇಂತಹುದೇ ಇನ್ನೊಂದು ಅನ್ಯಾಯ ವಿಧವೆ ಮತ್ತು ಅವಿವಾಹಿತ ಸ್ತ್ರೀಯರ ಬಗ್ಗೆ ಮಸೂದೆಯಲ್ಲಿ ವಿನಾಯಿತಿ ಇಲ್ಲದಿರುವುದು ತುಂಬಾ ಆಶ್ಚರ್ಯವಾಗಿದೆ ಅಪ್ರಾಪ್ತ ವಯಸ್ಕರು, ಮಾನಸಿಕ ದೌರ್ಬಲ್ಯವುಳ್ಳವರು ಸೈನಿಕರು ಇವರಿಗೆ ಗೇಣಿಗೆ ಕೊಡಲು ಅವಕಾಶವಿರುವಂತೆ ವಿಧವೆಯರಿಗೂ, ಮತ್ತು ಧಾರ್ಮಿಕ ಸಂಸ್ಥೆಗಳವರಿಗೂ ಅವಕಾಶ ಒದಗಿಸಿಕೊಡುವುದು ಯುಕ್ತವೆಂದು ನನ್ನ ಅಭಿಪ್ರಾಯ ಯಾರ್ಯಾರಿಗೋ ಸವಲತ್ತುಗಳನ್ನು ಒದಗಿಸಿರುವ ಮಸೂದೆ ಸನ್ಯಾಸಿ ಮತ್ತು ತಾಪಸಿಯರಿಗೆ (ವಿಧವೆ ಮತ್ತು ಕನ್ಯೆ ತಾಪಸಿಯರಿಂದ್ದಂತೆಯೇ) ವಿನಾಯಿತಿ ಕೊಡದಿರುವುದು ತುಂಬಾ ಅನ್ಯಾಯ ಸನ್ಯಾಸಿ ಮತ್ತು ತಾಪಸಿಯರ ಶಾಪಕ್ಕೆ ಯಾರೂ ಗುರಿಯಾಗಬಾರದು. ನಮ್ಮಲ್ಲಿ ವಿಧವೆಯರ ಬಾಳು ಕರುಣಾಜನಕವಾಗಿದೆ ಕನ್ಯೆಯರಿಗೆ ವರ ದೊರಕಿಸುವುದು ಗೋಳಾಗಿರುವಾಗ ಇಂಥ ನಿರ್ದಯೆಯುಳ್ಳ ಮಸೂದೆ ತುಂಬಾ ಅಪಾಯಕಾರಿ ಎಂದು ಹೇಳಬೇಕಾಗುತ್ತದೆ. ಇದನ್ನೂ ಮಾನವೀಯತೆಯ ದೃಷ್ಟಿಯಿಂದ ನೋಡಿಲ್ಲವೆಂದು ಖಂಡಿತವಾಗಿ ಹೇಳಬಯಸುತ್ತೇನೆ. ಇದು ಹೇಗಿದೆ ಎಂದರೆ ಒಂದು ಕಡೆ ಪಟ್ಟಭದ್ರ ಹಿತಗಳಿಗೆ ರಕ್ಷಣೆ ಮತ್ತೊಂದು ಕಡೆ ಧಾರ್ಮಿಕ ಸಂಸ್ಥೆಗಳು ವಿಧವೆಯರು ಕನ್ಯೆಯಾರಿಗೆ ಬರೆ ಹಾಕುವ ಶಿಕ್ಷೆ ಹೀಗಾದರೆ ಮಸೂದೆ ಜನ ಪ್ರಿಯವಾಗಲು ಆತಂಕವಾಗುವುದಿಲ್ಲವೇ ಎಂದು ನಮ್ಮ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಕಾರಣ ಈ ಮಸೂದೆ ಶಾಸನವಾಗಿ ಹೊರಬೀಳುವ ಮುಂಚೆ ಮಾನ್ಯ ಕಡಿದಾಳರು ಈ ದ್ವಿಮುಖ ನೀತಿಯನ್ನು ವಿಮರ್ಶಿಸಿ ಲೋಪಗಳನ್ನು ಸರಿಪಡಿಸಬೇಕೆಂದು ವಿನಂತಿಸುತ್ತಿದ್ದೇನೆ.

''ಲೋಕೋ ಭಿನ್ನರುಚಿಃ'' ಎಂಬಂತೆ ಭೂಸುಧಾರಣೆಯಂತಹ ರಾಷ್ಟ್ರೀಯ ಪ್ರಶ್ನೆಗಳಲ್ಲಿ ಭಿನ್ನಾಭಿಪ್ರಾಯ ಬರುವುದು ಸಹಜ ಯೋಜನಾ ಆಯೋಗದ ಕೇಂದ್ರ ಭೂಸುಧಾರಣಾ ಸಮಿತಿಯವರೇ ಪರಮಾವಧಿ ವಿಸ್ತೀರ್ಣ ಹೆಚ್ಚೆಂದು ಅಭಿಪ್ರಾಯ ಪಟ್ಟಿದ್ದಾರೆಂದು ತಿಳಿದು ಬಂದಿದೆ ಉಭಯತ್ರರಿಗೂ ನ್ಯಾಯ ದೊರಕಿಸಿ ಕೊಡತ್ತೇನೆಂದು ಭರವಸೆಕೊಟ್ಟಿರುವ ಮನ್ನರವನ್ನೂ ಮಂತ್ರಿಗಳು ಸದಸ್ಯರು ತೋರಿಸಿರುವ ಎದ್ದು ಕಾಣುವಂಥ ಜನತೆಯ ಹಿತಕ್ಕೆ ಧಕ್ಕೆಯುಂಟು ಮಾಡುವಂಥ ಲೋಪದೋಷಗಳನ್ನು ಸರಿಪಡಿಸಿ ಭೂಸುಧಾರಣೆ ಮಸೂದೆಯನ್ನು ಶಾಸನ ಮಾಡಬೇಕೆಂದು ವಿನಂತಿಸಿ ಮಸೂದೆಯನ್ನು ಅನುಮೋದಿಸುತ್ತೇನೆ. ಮಾನ್ಯ ಮಂಜಪ್ಪನವರ ಮಸೂದೆಯನ್ನು ಮಂಡಿಸುವಾಗ ಕೊಟ್ಟ ವಿವರಣೆಯಲ್ಲಿ ''ಸರ್ವೇ ಜನಾಃ ಸುಖಿನೋ ಭವಂತು'' ಎಂದು ಹೇಳಿದ್ದಾರೆ ಈ ತತ್ವದಂತೆ ಆಗ ಬೇಕಾದರೆ ಮಸೂದೆ ''ಸತ್ಯಂ ಶಿವಂ ಸುಂದರಂ'' ಆಗಬೇಕು. ಹಾಗಾಗದಿದ್ದರೆ ಸರ್ವೇ ಜನಾಃ ಸುಖಿನೋ ಭವಂತು ಆಗುವುದಿಲ್ಲ ಆದುದರಿಂದ ಮತ್ತೊಮ್ಮೆ ವಿಮರ್ಶೆಮಾಡಿ ಶಾಸನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಾ ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri B. SHAMSUNDAR (Bhalki).—Sir, before I say something on the Bill, I have to bring to the notice of the House one or two points of a general character. Sir, the Minister for Revenue is functioning under a Consitution which swears by secularism and we are expected to avoid all references to God in the records of Government. I am sorry to note that the Minister has departed from this wholesome procedure because in the last sentences of the speech which he read out he has brought in the name of God, a God who has committed the treachery of keeping us in a down-trodden condition all these years. In the name of religion and God, we have been kept under the thumb of the so-called upper classes and it is from this God that Mr. Kadidal Manjappa wishes to secure succor. It is a matter for regret that he has committed this sin of bringing in God unnecessarily and importing religion into our discussions. This Government which carried on a tirade against the previous Government and succeeded in erasing the words "Government's work is God's work", should not have fallen into the same folly of associating God in conducting the business of the House. I leave it at that.

Sir, the cabinet is responsible to this House. They are expected to act only on the materials we furnish to them through this House. The Select Committee is expected only to examine the memoranda submitted to them or any petition given to this house according to rules. I want to know whether the Committee was entitled to take decisions on the basis of the directives issued by the so-called Planning Commission, which sits in Delhi. I would like to know if the Commission has submitted any petition to this House or to the Committee and why this House was kept in darkness to the developments. I would like to ask what the status of the Planning Commission is *vis-a-vis* this House and whether this House is bound to bow down to the wishes of the Planning Commission.

Sir, this Bill was conceived long ago. Even before independence, the thoughts of Congressmen were pregnent with ideas on land reforms. The Bill as such was introduced two years ago and after two years of painful labour, a dead mouse has been produced. This Bill is out-dated. Thirteen years of Congress rule has given the handle to the moneyed and landed-property people to so manage their affairs as to render all talk of land reforms a failure. They have allowed so much time to lapse and given the burial to any effective implementation of land reforms.

The Minister's replies have been couched in sad terms. I ask him: Will these reforms result in greater agricultural production? No. Will the reforms put an end to litigation? No. It would only add. It is unfortunate that all the reforms that the Congress has been able to introduce have tended to create confusion and trouble in the country. Take for instance, the Reorganisation of States and the linguistic division of the country. It has spelled ruin and created innumerable

(Sri B. SHAMSUNDAR)

problems. In the same manner, land reforms would add to the trials and tribulations of the people. I have drafted amendments to the Bill and if they are accepted, we will go a long way towards achieving the objectives of land reforms. Like all basic and heavy industries, agriculture should be a State industry. The existing landholder should be treated as tenants or mortgagees and compensation may be paid to them in the form of debentures equal to his right in the land. In the scheme I have suggested there shall be no landlords, no tenants, no landless labourers.

Dr. R. NAGAN GOWDA.—Has my friend any idea as to the financial commitments if the Government were to take over the lands and issue debentures and pay interest ?

Sri B. SHAMSUNDAR.—I will answer that point. Sir, we are living in an age where there is keen competition in all fields, including agriculture. Mr. Marshall who is an authority on agriculture has stated fragmentation of land will result in the economic ruin of the country. I know the idea of the Planning Commission and our administrators here is to condemn the poor agriculturists to one or two acres of land so that he cannot find salvation for ever and improve his prospects. You want to keep the labourers where they are today and even worsen their conditions. All great authorities on agriculture have advocated joint production on a large scale and yet you want to break up lands into small bits. This idea may have been good 13 years ago but since then idea on agriculture has changed and small patches of land are not the ideal means of increasing agricultural production. Dr. Nagan Gowda wants me to calculate the cost to Government. He is an agriculturist and he knows what I am saying. Let him agree in principle and we can sit together and do some arithmetics. Dr. Nagan Gowda is accustomed to abide by the decisions of clerk and sign on the dotted line.

Mr. SPEAKER.—We will adjourn now for recess.

3-00 P.M.

The House adjourned for recess at Three of the Clock and reassembled at Thirty Minutes past Three of the Clock.

[Mr. SPEAKER in the Chair]

† Sri B. SHAMSUNDAR.—Sir, the Hon'ble Dr. Nagan Gowda had asked me whether would not have to incur a lot of money by adopting my suggestion. You do not think in terms of money when you want to executive big projects. When you could not collect money to execute

big projects. in this country, you went abroad, borrowed money and executed your plans. I am sure there was a proposal by the Government of America to the Planning Commission to establish State Farms here. After establishing them here, they wanted to hand them over to the Government of India. I am sorry to say that our Government rejected it. This news appears in some newspapers and magazines. What I want to impress upon you is this that these Bills and measures are out-of date and we will not be able to stand competition with the production of other countries. We will be ruining our own lands and we will be rendering our lands deserts. What sort of definitions have you given to certain terms like piece of land, division of land, inheritance of land etc.? For example the definition of 'cultivating personally' is a curious one. It is economically very bad and you cannot say that it is an economic term at all I do not want to go into the details. If I remember it, any person can cultivative personally, through his agent or labourers or tenants, etc. At the Avadi Congress you had embodied the ve y conception of 'land to the tiller' in a resolution. I shall give an illustration about this land reforms. In a certain mandir *i.e*, temple, there is a diety which is worshipped by all. Whoever comes there offers something to the diety. One day. the diety asked the pujari, "You, wonderful fellow, everbody comes to me and offers something. You do not offer anything at all. What is the matter ?" Then, that pujari took a knife, cut the nose of the diety and offer it. In the same way, by cutting the throats of the masses, the ryots, you want to offer them as gifts to them. What is this land reforms ? The very conception of land reform is that land should go the tiller. There should not be a tenant or landless labourer. This is the concept of it, but here you retain the landless labourers, the tenants the landlords who are not cultivating the lands. So, in effect. the entire conception is violated by you. It is not land reforms which you are introducing but something complex just to bind the masses, just to keep the masses under your thumb and guide them in whatever way you like. I do not want to say much because I disagree with the very spirit of this Bill. I want that something new, something radicial should be brought in before we are doomed economically.

[MR. DEPUTY SPEAKER in the Chair]

I will place before you only one idea. Our country is an agricultural country. This is an accepted fact. Wherever this Government representatives go and make statements, they say that this an agricultural country. 80 per cent of the people are agriculturist according to the Planning Commission Report itself Out of this 80 per cent, 20 to 23 per cent are landless and these landless labourers are mostly Scheduled Cast people, The people or the community who hold the reigns of this Government or their forefathers or the people who lived here in the past due to their religious belief, due to their religious custom, due to Manu Dharma, etc. kept these people away from the lands as labourers for centuries together. Recently, Mr. V. K. R. V. Rao

(Sri B. SHAMSUNDER)

the Vice-Chancellor of the Delhi University, wrote an article which appeared in the Indian express on land reforms and Scheduled Castes. He said that if these 22 per cent of the peop e are given lands, it will work in two wars. He agrees with my proposal. He says, "if you want to implement the la d reforms, the first thing that you should do is to give lands to the Scheduled Caste people who are held as untouchables. Then, it will serve two purpose—one is social and the other is economical." In this way, the canker of untouchab lity will disappear and they will feel that are the sons of the soil. But this wonderful Government of ours have issued some land distribution rules since a year or so, I think Sri Kadidal Manjappa is not the author of it but he has signed it and is therefore bound by it. The rules say that out of the existing Government waste lands 50 per cent should go to the high caste Hindus and the other half to the Scheduled Caste people.

Sri KADIDAL MANJAPPA.—According to them, 60 per cent will go to the Scheduled Caste people.

Sri B. SHAMSUNDAR.—I do not want to go into the details because the Minister knows them. This rules of yours is affecting 20 per cent of the landless people who are mostly Scheduled Caste people. The other thing is, they have issued an order to the effect that any landlord who has occupied the lands adjacent to his own land, can cultivate it and that patta can be made in his name.

Sri KADIDAL MANJAPPA.—No. The circular issued is, if the landlord without knowing the boundaries has occupied a few guntas, then each case may be considered on its merits sympathetically. I have never giving a blank cheque.

Sri B. SHAMSUNDER.—A few guntas means a few acres. That is what has been done. If you want I will wive you any number of instances. When a landlord has already got lands, where is the necessity to issue such a circular

Sri KADIDAL MANJAPPA.—The Hon'ble Member does not understand the conditions prevailing in certain areas. Without knowing the boundary marks if a person has got a few guntas, in such cases only this circular applies. In the case of Scheduled Castes if they have occupied it continuously for six years, they should be confirmed.

Sri B. SHAMSUNDER.—In Hyderabad area there is an order that any Harijan who has occupied a land the patta should be made in his name I gave the Hon ble Minister a copy of that order. The Hyderabad circular was more progressive. Even gomal is occupied by Harijans, the patta should be made in his name. Having the experience of Andhra, Maharashtra and Kerala Land Reforms Bills, you have not only taken the flaws they have left also you have tried to squeeze the landless labourers.

I donot want to go clause by clause because I may require two days. However I may say that every word the language and even sentences in the Bill are not happy I am sorry I have taken much time. I quite disagree with this land reform and I want a more radical Bill to be brought forward and all the land in the country should be the State's concern.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಸನ್ಮಾನ್ಯ ಅಧ್ಯಕ್ಷರೇ, ಬಹಳ ತಡವಾದರೂ ಚಿಂತೆಯಿಲ್ಲ ಕಾಂಗ್ರೆಸ್ ಪಕ್ಷದವರು ಈ ದೇಶದ ಜನಾಂಗಕ್ಕೆ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದರೋ ಅದನ್ನು ಅಕ್ಷರಶಃ ಪಾಲಿಸಿಕೊಂಡು ಬರಲಿಕ್ಕೆ ಇಲ್ಲಿಯವರೆಗೂ ಬಹಳ ಪ್ರಯತ್ನಗಳನ್ನು ಪಟ್ಟು ಈ ವರ್ಷ ಅದನ್ನು ಜಾರಿಗೆ ತರುವ ಈ ಕಾರ್ಯವನ್ನೀಗ ನಿರ್ವಹಿಸುತ್ತಿದ್ದಾರೆ.

Sri M. RAMAPPA (Harihar).—Better late than never ಎಂತರೋ ?

ಶ್ರೀ ಎಂ. ಎಂ. ಪಾಟೀಲ್.—ಆ ವಿಚಾರವೇನೇ ಇರಲಿ ಅಂತೂ ಈಗ ಈ ಒಂದು ರೀತಿಯಲ್ಲಿ ನಮ್ಮ ಕಂದಾಯ ಮಂತ್ರಿಗಳು ಧೈರ್ಯಮಾಡಿ ಈ ವಿಚಾರದಲ್ಲಿ ಮುಂದಕ್ಕೆ ಹೆಜ್ಜೆ ಇಟ್ಟಿದ್ದಾರೆ ಈಗ ಈ ಭೂಸುಧಾರಣೆ ಮಸೂದೆಯನ್ನು ಅವರು ಈ ಮಾನ್ಯ ಸಭೆಯ ಮುಂದೆ ತಂದುದಕ್ಕಾಗಿ ನಾನು ಪ್ರಪ್ರಥಮವಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸುತ್ತಿದ್ದೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರ).—ನಾರಾಯಣ! ನಾರಾಯಣ!

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಅವರೇಕೆ ಶಿವ-ಶಿವ! ಎಂತ ಹೇಳುತ್ತಿಲ್ಲ ! ನಾರಾಯಣ-ನಾರಾಯಣ ಎಂತ ಹೇಳುತ್ತಾರೆ!

ಶ್ರೀ ಎಂ. ಎಂ. ಪಾಟೀಲ್.—"ದೇವ ಒಬ್ಬ-ನಾಮ ಹಲವು" ಎಂಬ ಅಂಶವನ್ನು ಶ್ರೀ ಮುಕ್ಕಣ್ಣಪ್ಪನವರು ಅರ್ಥಮಾಡಿಕೊಳ್ಳಲೇಳು.

Sri. V. S. PATIL.—May I ask why the Hon'ble Member is complimenting the Minister ? It is the work done by the whole committee. He must compliment the whole commit and not the only member.

ಶ್ರೀ ಎಂ. ಎಂ. ಪಾಟೀಲ್.—ಆ ಪರಿಶೀಲನಾ ಜಂಟಿಸಮಿತಿಯವರು ಇದರ ಪೂರ್ಣಾಧಿಕಾರವನ್ನು ಕಂದಾಯ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಆದ್ದರಿಂದ ನಾನು ಅವರಿಗೆ ನನ್ನ ವಂದನೆಗಳನ್ನರ್ಪಿಸಿದೆನು.

ಶ್ರೀ ಎಂ. ರಾಮಪ್ಪ.—ಮಾನ್ಯ ಸದಸ್ಯರು ಆ ಸೆಲೆಕ್ಟ್ ಕಮಿಟಿಯವರಿಗೇಕೆ ಅಭಿನಂದನೆಗಳನ್ನು ಸಲ್ಲಿಸುತ್ತಿಲ್ಲವೆಂದರೆ ಆ ಸಮಿತಿಯಲ್ಲಿ ಕೆಲವರು ಈ ಭೂಸುಧಾರಣೆಯನ್ನು ತರುವುದೇ ಬೇಡವೆಂದು ಹೇಳಿ ಇದನ್ನು ಅಪೋಸ್ ಮಾಡಿರತಕ್ಕವರು ಇದ್ದಾರೆ. ಆ ವಿಚಾರ ಇವರಿಗೆ ಚೆನ್ನಾಗಿ ಗೊತ್ತಿದೆ ಅದರಿಂದ ಅವರು ಅಭಿನಂದನೆಗಳನ್ನು ಆ ಸಮಿತಿಗೆ ಅರ್ಪಿಸಲು ಇಷ್ಟವಿಲ್ಲವೇನೋ !

ಶ್ರೀ ಎಂ. ಎಂ. ಪಾಟೀಲ್.—ಆದರೆ ನಾನು ಈ ಸಭೆಯ ಮಾನ್ಯ ಸದಸ್ಯರ ಗಮನಕ್ಕೆ ಒಂದು ಅಂಶ ತರಬೇಕಾಗಿದೆ. ಇತರ ಸದಸ್ಯರು ಮಾತನಾಡುತ್ತಿದ್ದಾಗ ನಾನು ಬಹಳ ಶಾಂತ ಚಿತ್ತದಿಂದ ಕೇಳುತ್ತಾ ಬಂದಿದ್ದೇನೆ. ಇತರ ಸದಸ್ಯರೂ ಸಹ ನಾನು ಮಾತನಾಡುವಾಗ ಅವರು ಶಾಂತಚಿತ್ತರಾಗಿ ಕೇಳಿದರೆ ಅದರಿಂದ ನಾವೆಲ್ಲರೂ ಈ ಮಾನ್ಯ ಸಭೆಯ ಘನತೆಯನ್ನು ಹೆಚ್ಚಿಸಿದಂತಾಗುತ್ತದೆ; ಈ ರೀತಿ ಎಲ್ಲರೂ ಅನುಸರಿಸಬೇಕೆಂದು ನಾನು ಎಲ್ಲರಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಮಾತನಾಡುತ್ತಿರುವಾಗ ಮೇಲಿಂದ ಮೇಲೆ ಅಡ್ಡಿ ಆತಂಕಗಳನ್ನು ತಂದೊಡ್ಡಿದರೆ ಅದರಿಂದ ಮಾತನಾಡತಕ್ಕ ಸದಸ್ಯರಿಗೆ ಅಡಚಣೆಯಾಗುತ್ತದೆ. ಅದಕ್ಕೆ ದಾರಿ ಮಾಡಬಾರದು. ಇನ್ನು ಈ ಭೂಸುಧಾರಣೆ ಬಿಲ್ಲಿನ ವಿಚಾರಕ್ಕೆ ಬಂದರೆ ನಮ್ಮ ಕಂದಾಯ ಸಚಿವರು

(ಶ್ರೀ ಎಂ. ಎಂ. ಪಾಟೀಲ್)

ಈ ಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ಅನೇಕರು ಅನೇಕ ಅಡ್ಡಿ ಆತಂಕಗಳನ್ನು ತಂದಾಗ್ಯೂ ಅವುಗಳನ್ನೆಲ್ಲ ಜಯಿಸಿಕೊಂಡು ಈ ಮಸೂದೆಯನ್ನು ಸಭೆಯ ಮುಂದೆ ತಂದುದಕ್ಕಾಗಿ ನಾನು ಅವರಿಗೆ ಆಭಾರಿಯಾಗಿದ್ದೇನೆ. ಭೂಸುಧಾರಣೆಯನ್ನು ನಾವು ಜಾರಿಗೆ ತರುವುದರ ವಿಚಾರದಲ್ಲಿ, ಅನೇಕ ಸಲ ಕಷ್ಟಗಳನ್ನು ಎದುರಿಸಬೇಕಾಗಿ ಬಂತು. ಆ ಕಷ್ಟಗಳೇನೆಂದರೆ, ಒಂದೇ ಸಮನಾಗಿ ಜನರಿಂದ ನಾನಾ ತರವಾದ ಟೀಕೆ ಟಿಪ್ಪಣಿಗಳು ಬಂದವು. ಭೂಸುಧಾರಣೆಯನ್ನು ಜಾರಿಗೆ ತರಲು ಅಡ್ಡಿ ಬರುವಂಥ ರೀತಿಯಲ್ಲಿ ಅನೇಕ ವಿಘ್ನಗಳುಂಟಾದವು. ಆದಾಗ್ಯೂ ನಾವು ಬಹಳ ತಾಳ್ಮೆಯಿಂದ ಅವುಗಳನ್ನೆಲ್ಲಾ ಸಹಿಸಿಕೊಂಡು ಈಗ ಇದನ್ನು ಕಾರ್ಯರೂಪಕ್ಕೆ ತರಲು ಈ ಏರ್ಪಾಡುಗಳನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ನಾನು ಮೊಟ್ಟಮೊದಲನೆಯದಾಗಿ ಈಗ ಸಭೆಯ ಮುಂದೆ ಬಂದಿರತಕ್ಕ ಭೂಸುಧಾರಣೆ ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಭೂಸುಧಾರಣೆ ವಿಚಾರವಾಗಿ ನಾನಾದರೂ ಆ ತತ್ವಗಳ ವಿಚಾರದಲ್ಲಿ ಈಗ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗಾಗಲೇ ಈ ತತ್ವಗಳನ್ನೆಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಈ ತತ್ವಗಳಲ್ಲಿ ಬರೆದಿದ್ದ ಕೆಲವು ಅಂಶಗಳನ್ನು ತೆಗೆದು ಇನ್ನೂ ಇನ್ನು ಸ್ವಲ್ಪ ತಿಳಿಮಾಡಿ ಕಳುಹಿಸಲು ಈ ವಿಚಾರವನ್ನು ಒಂದು ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿತ್ತು. ಆದರೆ ಆ ಪರಿಶೀಲನಾ ಸಮಿತಿಯವರು ತಮ್ಮ ಪರಿಶೀಲನೆ ನಡೆಸಿ ಈಗ ಈ ವಿಚಾರವನ್ನು ಸಭೆಗೆ ಕಳುಹಿಸಿದ್ದಾರೆ. ಆದರೆ ಇವರಲ್ಲಿಯೂ ಕೆಲವು ನ್ಯೂನತೆಗಳನ್ನು ಉಳಿಸಿವೆ. ಅವುಗಳನ್ನು ಸರಿಪಡಿಸಲು ನಾನೀಗ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ.

ಈ ಬಗ್ಗೆ ನನ್ನ ಮೊಟ್ಟಮೊದಲನೆಯ ಸೂಚನೆ ಏನೆಂದರೆ. ಈ ವಿಧೇಯಕದಲ್ಲಿ ಈಗ ಉಲ್ಲೇಖಿಸಿರುವ ರೀತಿಯನ್ನು ನೋಡಿದರೆ 27 ಎಕರ-ಎಂದರೆ ಸ್ಟ್ಯಾಂಡರ್ಡ್ 27 ಎಕರೆ ಭೂಮಿಯನ್ನು ಒಂದು ಪರಮಾವಧಿ ಕುಟುಂಬ ಹಿಡುವಳಿ ಎಂತ ತೀರ್ಮಾನ ತಗೆದು ಕೊಂಡಿದ್ದಾರೆ. ಈ ವಿಚಾರದಲ್ಲಿ ನಾನು ತುಂಬಾ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಈಗ ಹೇಳಿರತಕ್ಕ ಪರಮಾವಧಿ ಜಮೀನೇನಿದೆ ಇದನ್ನು ಒಪ್ಪಿಕೊಂಡರೆ ಮುಂದೆ ಭೂರಹಿತ ಜನರು-ಯಾರಿಗೆ ಉತ್ತು-ಬಿತ್ತಿ ಬೆಳೆಯಲು ಸ್ವಂತ ಜಮೀನಿರುವುದಿಲ್ಲವೋ ಅಂಥ ಭೂರಹಿತ ಜನರಿಗೆ ಏನಾದರೂ ಜಮೀನು ಸಿಕ್ಕಲು ಸಾಧ್ಯವಿದೆಯೇ-ಇಲ್ಲವೇ ಎಂಬ ಅಂಶವನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಆ ಪರಿಶೀಲನಾ ಸಮಿತಿಗೇಕೆ ಇಷ್ಟು ಆಲೋಚನೆಗೆ ಅಭಾವ ಬಂದಿತೋ ನನಗೆ ಅದು ತಿಳಿಯದಾಗಿದೆ ನನ್ನ ಅಭಿಪ್ರಾಯದಲ್ಲಿ ಈ ದಿವಸ ಯಾರು ಭೂರಹಿತರಾದ ಜನರಿದ್ದಾರೋ ಅಂಥವರಿಗೆ ಅಷ್ಟಿಷ್ಟು ಜಮೀನು ಸಿಗಬೇಕಾಗಿದ್ದರೆ ಒಂದು ಕುಟುಂಬದ ಹಿಡುವಳಿಯಂತ ಇವರಲ್ಲಿ ಏನು ಹೇಳಿದ್ದಾರೋ ಅದರ ಮೂರರಷ್ಟನ್ನು ಪರಮಾವಧಿ ಎಂತ ಮಾಡಿದರೆ-ಎಂದರೆ ಪರಮಾವಧಿ ಹಿಡುವಳಿ 18 ಎಕರೆ ಸ್ಟ್ಯಾಂಡರ್ಡ್ ಇರಬಹುದೆಂದು ನಿಗದಿಮಾಡಿದರೆ ಇದರಿಂದ ಬಹಳ ಜನರಿಗೆ ಅನುಕೂಲವಾಗಬಹುದೆಂದು ಹೇಳುತ್ತೇನೆ.

Sri C. J. Muckannappa.—Sir, I want to bring to your notice that the operator who is sitting above just stretches his legs and hands now and then. May I request you to kindly see that some screen is put up there ?

Mr. Deputy Speaker.—That will be looked into.

4–00 P.M.

ಶ್ರೀ ಎಂ. ಎಂ. ಪಾಟೀಲ್.—ಸ್ವಾಮಿ ಈ ವಿಧೇಯಕದ ಪ್ರಕಾರ ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರೆ-ಉದಾಹರಣೆಗಾಗಿ ಹೇಳುತ್ತಿದ್ದೇನೆ-ಪ್ರಥಮ ತರಗತಿ ಜಮೀನೆಂದೇನು ಹೇಳುತ್ತಿದ್ದಾರೆ ಅದರಲ್ಲಿ ಒಂದು ವರ್ಷಕ್ಕೆ ಎರಡು ಬತ್ತದ ಬೆಳೆ ತೆಗೆಯಲು ಅವಕಾಶವಿರುವ ಆ ಜಮೀನಿನಲ್ಲಿ

ಒಂದು ವರ್ಷಕ್ಕೆ ಒಂದು ಎಕರೆಗೆ ಸರಾಸರಿ ನನ್ನ ಜಿಲ್ಲೆಯ ಅನುಭವ ಹೇಳಬೇಕೆಂದರೆ 20 ಪಲ್ಲ ಬಿತ್ತ ಬರುತ್ತದೆ. ಆ 20 ಪಲ್ಲವನ್ನು 18 ರಿಂದ ಗುಣಾಕಾರ ಮಾಡಿದಾಗೆ 360 ಪಲ್ಲ ಆಗುತ್ತದೆ. 18 ಪರಮಾವಧಿ ಸ್ಟ್ಯಾಂಡರ್ಡ್ ಎಕರೆಯಿರುವ ಎಂದು ಲೆಕ್ಕದಲ್ಲಿ ಹೇಳುವಾಗೆ ಒಂದು ಪಲ್ಲಾಕ್ಕೆ 35 ರೂಪಾಯಿ ಕರಿದಿ ಕಟ್ಟಿದರೆ 12,600 ರೂಪಾಯಿ ಬರುತ ದೆ. ಅದರಲ್ಲಿ ವ್ಯವಸಾಯದ ಖರ್ಚು ಒಂದು ಎಕರೆಗೆ ಸರಾಸರಿ 200 ರೂಪಾಯಿಗಳಂತೆ 3,600 ರೂಪಾಯಿಗಳನ್ನು ವಜಾ ಮಾಡಿದರೆ 9 000 ರೂಪಾಯಿಗಳ ನಿವ್ವಳ ಆದಾಯ ಪರಮಾವಧಿ ಹಿಡುವಳಿಗೆ ಬಂದಹಾಗಾಯಿತು. ಹತ್ತು ಜನರಿಗಿಂತ ಹೆಚ್ಚುಮಂದಿ ಕುಟುಂಬದಲ್ಲಿ ಇದ್ದಾಗ್ಯೆ ಅದರ ಎರಡರಷ್ಟಿರಬೇಕೆಂದರೆ 18 ಸಾವಿರ ರೂಪಾಯಿಗಳ ಉತ್ಪತ್ತಿ ಬಂದ ಹಾಗಾಗುತ್ತದೆ. ಇದೇ ರೀತಿ ಖುಷ್ಕಿ ಜಮೀನಿನ ಉದಾಹರಣೆ ಹೇಳಬೇಕೆಂದರೆ, ಕೇವಲ ಮಳೆಯನ್ನೆ ಅವಲಂಬಿಸಿರುವ ಜಮೀನುಳ್ಳ ಜನಾಂಗಕ್ಕೆ ಒಂದು ವರ್ಷಕ್ಕೆ ಸುಮಾರು 216 ಎಕರೆವರೆಗೆ ಸ್ಟ್ಯಾಂಡರ್ಡ್ ಜಮೀನು ಬಿಡಬೇಕಾಗುತ್ತದೆ. ಅದಕ್ಕೆ ಜೋಳ ಹಾಕಿದರೆ, ಒಂದು ಎಕರೆಗೆ ಎರಡು ಪಲ್ಲಾಗಳ ಪ್ರಕಾರ ಲೆಕ್ಕಹಾಕಿದರೆ 432 ಪಲ್ಲಾಗಳಾಗುತ್ತವೆ. ಈ 432 ಪಲ್ಲಾಗಳಿಗೆ ಪಲ್ಲಾಕ್ಕೆ 35 ರೂಪಾಯಿಗಳ ಧಾರಣೆ ಪ್ರಕಾರ ಈ ದಿವಸ ಲೆಕ್ಕಹಾಕಿದರೆ 15,120 ರೂಪಾಯಿಗಳಷ್ಟು ಆದಾಯ ಬಂದಂತಾಗುತ ದೆ. ಇದಕ್ಕೆ ಒಂದೆಕರೆಗೆ 15 ರೂಪಾಯಿಗಳ ಪ್ರಕಾರ ಖರ್ಚು 3,240 ರೂಪಾಯಿಗಳಾಗುತ್ತದೆ. ಇದನ್ನು ವಜಾ ಮಾಡಿದರೆ 11,880 ರೂಪಾಯಿಗಳ ನಿವ್ವಳ ಉತ್ಪತ್ತಿ 216 ಎಕರೆ ಜಮೀನಿಗೆ ಬಂದಂತಾಗುತ್ತದೆ, 10 ಜನರಿರುವ ಕುಟುಂಬಕ್ಕೆ ಲೆಕ್ಕ ಹಾಕಿದರೆ 23,760 ರೂಪಾಯಿಗಳ ಉತ್ಪತ್ತಿಯಾಗುತ್ತದೆ. ಇದೇ 216 ಎಕರೆ ಜಮೀನಿನಲ್ಲಿ ಸೇಂಗಾ ಬೆಳೆದರೆ ಒಂದು ಎಕರೆಗೆ 8 ಪಲ್ಲ ಉತ್ಪತ್ತಿಯಾಗುತ್ತದೆ. ಅದಕ್ಕೆ ಒಂದು ಪಲ್ಲಾಕ್ಕೆ 20 ರೂಪಾಯಿಗಳ ಧಾರಣೆ ಪ್ರಕಾರ ಲೆಕ್ಕಹಾಕಿದರೆ 34,560 ರೂಪಾಯಿಗಳ ಉತ್ಪತ್ತಿ 16 ಎಕರೆಗಳಲ್ಲಿ ಬಂದಂತಾಗುತ ದೆ. ಈ ಉತ್ಪತ್ತಿಗೆ ಆಗುವ ಖರ್ಚನ್ನು ಎಕರೆಗೆ 50 ರೂಪಾಯಿಗಳಂತೆ ವಜಾ ಮಾಡಿದರೆ ಅಂದರೆ 10,800 ರೂಪಾಯಿಗಳ ಖರ್ಚನ್ನು ಕಳೆದರೆ 23,760 ರೂಪಾಯಿಗಳ ಉತ್ಪನ್ನ ಬಂದಂತಾಗುತ್ತದೆ. ಈ ಪ್ರಕಾರವಾಗಿ 5 ಜನರಿರುವ ಕುಟುಂಬಕ್ಕೆ ಹಂಚಿಕೆ ಮಾಡಿದಾಗೆ, ಪ್ರಥಮ ವರ್ಗದ ಜಮೀನಿಂದ ಒಂದು ವರ್ಷಕ್ಕೆ ಒಬ್ಬನಿಗೆ 1,800 ರೂಪಾಯಿಗಳ ಆದಾಯ ಬರುತ್ತದೆ, ಎರಡನೇ ತರಗತಿ ಅಂದರೆ ಖುಷ್ಕಿ ಜಮೀನಿನಲ್ಲಿ ಜೋಳ ಹಾಕಿದರೆ 2,376 ಸೇಂಗಾದಿಂದ 4,752 ರೂ. ಬರುತ್ತದೆ. ರೂಪಾಯಿಗಳ ಆದಾಯ ಬರುತ್ತದೆ, ಈ ದಿವಸ ನಮ್ಮ ದೇಶದಲ್ಲಿ ಕೂಲಿಯಿಂದ ಜೀವನ ಮಾಡುತ್ತಿರುವವರ ಉತ್ಪತ್ತಿ ಲೆಕ್ಕ ಹಾಕಿದರೆ-ಪ್ರತಿನಿತ್ಯವೂ ಕೂಲಿ ಸಿಕ್ಕುವುದಿಲ್ಲ-ದಿವಸಕ್ಕೆ ಒಂದು ರೂಪಾಯಿ ಸಿಕ್ಕುತ್ತದೆಂದರೂ ಒಂದು ವರ್ಷಕ್ಕೆ 360 ರೂಪಾಯಿ ದೊರೆಯುತ್ತದೆ. ಇಂಥ ಒಂದು ಸಂದರ್ಭದಲ್ಲಿ ಪರಮಾವಧಿ ಎಷ್ಟಿರಬೇಕೆಂಬುದನ್ನು ಪರಿಶೀಲಿಸಬೇಕಾಗುತ ದೆ. ಪ್ಲಾನಿಂಗ್ ಕಮಿಷನವರು ಕೂಡ ಸೀಲಿಂಗ್, ಪರಮಾವಧಿ ಹಿಡುವಳಿ ಕಡಮೆ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಿ ಈಗಲಾದರೂ ತಿದ್ದುಪಡಿ ಮಾಡಿ ಗೊತ್ತು ಮಾಡಿರುವುದನ್ನು ಕಡಮೆ ಮಾಡಲು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಪರಿಹಾರ ವಿಚಾರ ಹೇಳಬೇಕೆಂದರೆ 8ನೆಯ ಕಾಲಮಿನಂತೆ ಕಾಲುವೆ ನೀರಿರುವ ಪ್ರದೇಶವಾದರೆ ರೆಂಟ್ $\frac{1}{4}$ ಅಂಶವಿರಬೇಕು ಎಂದು ಗೊತ್ತುಮಾಡಿದ್ದಾರೆ. ಈ ಪ್ರಕಾರ ಲೆಕ್ಕ ಹಾಕಿದರೆ 20 ಪಲ್ಲಾಗಳು ನಮ್ಮ ಭಾಗದಲ್ಲಿ ಒಂದು ಎಕರೆಗೆ ಬರುತ್ತವೆ. ಇದನ್ನು 4ರಿಂದ ವಿಭಾಗ ಮಾಡಿದರೆ 5 ಪಲ್ಲಾಗಳು ಬರುತ್ತವೆ. ಒಂದು ಪಲ್ಲಾ ಬಿತ್ತಕ್ಕೆ 35 ರೂಪಾಯಿಗಳ ಧಾರಣೆ ಪ್ರಕಾರ ಸರಾಸರಿ 15 ಪಟ್ಟು ಅಂದರೆ 2,625 ರೂಪಾಯಿ ಒಂದು ಎಕರೆಗೆ ಬೆಲೆಯಾಗುತ್ತದೆ. ಯಾವ ದೃಷ್ಟಿಯಿಂದಲೂ ಕೂಡ ಇವತ್ತಿನ ದಿವಸ ತರಿ ಜಮೀನಿಗೆ 2,625 ರೂಪಾಯಿ ಬೆಲೆ ಕಟ್ಟುವುದು ಸರಿಯಲ್ಲ ಅದು ಮಾರ್ಕೆಟ್ ವ್ಯಾಲ್ಯೂ ಪ್ರಕಾರ ಕೂಡ ಸರಿಯಾಗಿರುವುದಿಲ್ಲ. ಈ ಸಂದರ್ಭದಲ್ಲಿ 15 ಪಟ್ಟು ಕೊಡಬೇಕೆಂದು ಹೇಳಿರುವುದೇ ಹೆಚ್ಚಾಗಿರುವಾಗ ಅದಕ್ಕಿಂತ ಹೆಚ್ಚು ಕೊಡಲು ಸಾಧ್ಯವಿಲ್ಲ.

(ಶ್ರೀ ಎಂ. ಎಂ. ಪಾಟೀಲ್)

ಇದನ್ನು ಇನ್ನೂ ಸ್ವಲ್ಪ ಕಡಮೆ ಮಾಡಿ 12 ಪಟ್ಟು ಎಂದು ನಿಗದಿ ಮಾಡಿದರೆ ಸರಿಯಾಗಿರುತ್ತದೆ ಎಂಬುದು ನನ್ನ ಅಭಿಪ್ರಾಯ. ಇನ್ನು ಮಿಶ್ರ ಜಮೀನಿನ ವಿಚಾರ ತೆಗೆದು ಕೊಂಡರೆ ಸೇಂಗಾ ಒಂದು ಎಕರೆಗೆ 8 ಪಲ್ಲಾ ಉತ್ಪತ್ತಿಯಾಗುತ್ತದೆ. ಇದಕ್ಕೆ ಪಲ್ಲಾ ಒಂದಕ್ಕೆ 20 ರೂಪಾಯಿ ಧಾರಣೆಯಂತೆ ಲೆಕ್ಕ ಹಾಕಿದರೆ 160 ರೂಪಾಯಾಗುತ್ತದೆ. ಇದರಲ್ಲಿ ¼ ಅಂಶವೆಂದರೆ 32 ರೂಪಾಯಾಗುತ್ತದೆ. ಇದರ 15 ಪಟ್ಟು 480 ರೂಪಾಯಿ ಆಗುತ್ತದೆ. ಒಂದು ಎಕರೆಗೆ ಸರಾಸರಿ 500 ರೂಪಾಯಿ ಬರುವುದಕ್ಕೆ ಅವಕಾಶವಿದೆ. ಇದನ್ನು ಸ್ವತಃ ಒಕ್ಕಲತನದ ಅನುಭವದಿಂದ ಈ ದಿವಸ ನಾನು ಹೇಳುತ್ತಿದ್ದೇನೆ. ಅಂಕಿಅಂಶಗಳು ನನಗೆ ಸಾಕಷ್ಟು ದೊರಕಿಲ್ಲ. ನಾನು ಹೇಳುವುದರಲ್ಲಿ ವೆತ್ಯಾಸವಿದ್ದರೆ ತಿದ್ದಿಕೊಳ್ಳಲು ತಯಾರಿದ್ದೇನೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ.

ನನ್ನ ಅಭಿಪ್ರಾಯವನ್ನು ಇಂದು ಸರಿ ಎಂದು ತಿಳಿದು ಆ ಪ್ರಕಾರ ಹೇಳುತ್ತಿದ್ದೇನೆ ನಾನು ಸ್ವತಃ ವ್ಯವಸಾಯವನ್ನು ಮಾಡುತ್ತಿರುವವನು. ನಾನು ಭೂಮಿಯನ್ನೇ ಅವಲಂಭಿಸಿಕೊಂಡು ಅದನ್ನೇ ಜೀವನಕ್ಕೆ ಆಧಾರವಾಗಿಟ್ಟು ಕೊಂಡಿದ್ದೇನೆ. ನಾನು ಹಳ್ಳಿಯಿಂದ ಬಂದಿರತಕ್ಕವನು ಎಂಬುದನ್ನು ಮಾನ್ಯ ರೇವಣಸಿದ್ದಪ್ಪನವರು ತಿಳಿದುಕೊಳ್ಳಬೇಕು. ಭೂಸುಧಾರಣೆಯನ್ನು ಮುಖ್ಯವಾಗಿ ಯಾವ ದೃಷ್ಟಿಯಿಂದ ಮಾಡುತ್ತಿದ್ದಾರೆ ಎಂದರೆ ಸಮಾಜದಲ್ಲಿ ಏರುಪೇರು ಇದೆ; ಅಂತರ ಜಾಸ್ತಿ ಇದೆ. ಅದನ್ನು ಹೋಗಲಾಡಿಸಬೇಕು ಎನ್ನುವ ಅಂಶವನ್ನು ದೃಷ್ಟಿಯನ್ನು ಪ್ರಬಲವಾಗಿ ಇಟ್ಟುಕೊಂಡು ಇಷ್ಟೊತ್ತು ಇಂಥಾ ಒಂದು ಮಹತ್ತರವಾದ ಸುಧಾರಣೆಯನ್ನು ಮಾಡುತ್ತಿದ್ದಾರೆ. ಯಾವುದೇ ಒಂದು ಸುಧಾರಣೆಯನ್ನು ಮಾಡಬೇಕಾಗಿದ್ದರೂ ಸಹ ಕಷ್ಟಗಳು ಅದರಲ್ಲಿ ಬರುತ್ತವೆ: ವಿಘ್ನಗಳು ಬರುತ್ತವೆ; ಉದಾಹರಣೆಗೆ ಹೇಳಬೇಕಾದರೆ ಸಮುದ್ರ ಮಥನ ಮಾಡುವಾಗ ಮೊದಲು ವಿಷ ಉದ್ಭವಿಸಿ ಆಮೇಲೆ ಅಮೃತ ಬಂತು ಆದ್ದರಿಂದ ಕಷ್ಟಗಳು ಬರುತ್ತಾ ಇರುವ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರದವರು ತಾಳ್ಮೆಯನ್ನು ವಹಿಸಿದ್ದಾರೆ; ಶಾಂತಿಯಿಂದ ಮುಂದುವರಿಯುತ್ತಾ ಇದ್ದಾರೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಟೀಕೆ ಟಿಪ್ಪಣಿಗಳನ್ನು ಮಾಡಿದರೂ ಸಹ ಅವುಗಳನ್ನೂ ಸಹಿಸಿಕೊಂಡು ಬರಿ ತತ್ವಬೋಧನೆಯನ್ನು ಮಾಡುವುದಲ್ಲದೆ ಅದನ್ನು ಕಾರ್ಯತಃ ನಡೆಸುತ್ತಿದ್ದೇವೆ ಎನ್ನುವುದನ್ನು ಕಾಂಗ್ರೆಸ್ಸಿನವರು ಈಗ ಸ್ವತಃ ಎತ್ತಿ ತೋರಿಸಿದ್ದಾರೆ. ಮಾನ್ಯ ಸಚಿವರು ಈ ಬಿಲ್ಲನ್ನು ಪಾಸು ಮಾಡಿ ಬರಲಿರುವ ಚುನಾವಣೆಯ ವೇಳೆಗೆ ಇದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತಾರೆ ಎಂದು ಸೂಚನೆ ಮಾಡಿ, ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಶಂಕರಪ್ಪ (ಹೊನಮುಗನ).—ಮಾನ್ಯ ಅಧ್ಯಕ್ಷರೇ ಭೂಸುಧಾರಣೆಯ ವರದಿಯ ಬಗ್ಗೆ ಸೆಲೆಕ್ಟ್ ಕಮಿಟಿಯವರು ಮಾಡಿರತಕ್ಕ ರಿಪೋರ್ಟನ್ನು ಈಗ ನಮ್ಮ ಮುಂದೆ ಇಟ್ಟಿದ್ದಾರೆ. ಈ ವಿಷಯದಲ್ಲಿ ನಾನು ಕೆಲವು ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಭೂಸುಧಾರಣೆ ಎನ್ನತಕ್ಕಂಥಾದ್ದು ಜಾರಿಗೆ ಬರುತ್ತದೆ ಎನ್ನುವ ಕೂಗು ದೇಶದಲ್ಲಿ ಹರಡಿದಾಗ ಜನರ ಅಭಿಪ್ರಾಯ ಏನಿತ್ತು, ಎಂದರೆ ಮೊದಲಿನ ಬಿಲ್ಲಿನಲ್ಲಿ ಆದಾಯದ ಪರಿಮಿತಿ ಇತ್ತು. ಆದ್ದರಿಂದ ಜನರಲ್ಲಿ ವ್ಯವಸಾಯ ಆದಾಯಕ್ಕೆ ಮಾತ್ರ ಪರಿಮಿತಿ ಬಾಕಿ ಕಸುಬಿಗೆ ಹಾಕಿಲ್ಲ ಎನ್ನುವ ಗೊಂದಲವಿತ್ತು. ಈಗ ಅದಿಲ್ಲ. ಕಾರಣ ಭೂ ಆದಾಯಕ್ಕೆ ಪ್ರತಿಯಾಗಿ ಸೀಲಿಂಗ್ ನಿಗದಿಯಾದ್ದರಿಂದ ಜನರಲ್ಲಿ ಸಮಾಧಾನವಿದೆ. ಕೊಂಡರೆ ಆಗ ಇದು ಅರ್ಥವಾಗುತ್ತದೆ. ಮೊದಲು ವ್ಯವಸಾಯ ಮಾಡತಕ್ಕ ಮನುಷ್ಯ ಆರೋಗ್ಯವಂತನಾಗಿ ದೃಢಕಾಯನಾಗಿ ಚಿಕ್ಕಂದಿನಿಂದಲೂ ವ್ಯವಸಾಯ ಮಾಡುವುದನ್ನು ಅಭ್ಯಾಸ ಮಾಡಿರಬೇಕು. ಸುಮ್ಮನೆ ಕುಳಿತುಕೊಂಡು ಭಾಷಣಗಳಮೇಲೆ ವ್ಯವಸಾಯ ಮಾಡುತ್ತೇವೆಂದರೆ ಪೈರು ಬೆಳೆಯುವುದಿಲ್ಲ. ಇಂಥಾ ಒಂದು ಸನ್ನಿವೇಶದಲ್ಲಿ ದೇಶದ ಜನಸಂಖ್ಯೆ

ಯಾದರೋ ಜಾಸ್ತಿಯಾಗುತ್ತಿದೆ. ಆಹಾರದ ಕೊರತೆ ಹೆಚ್ಚುತ್ತಿದೆ. ಇಂಥಾ ಕಾಲದಲ್ಲಿ ಭೂಮಿಯಲ್ಲಿ ಬೆಳೆಯನ್ನು ಬೆಳೆಯುತಕ್ಕವನಿಗೆ ಒಂದು ಹಕ್ಕುದಾರಿಕೆ ಇರಬೇಕು. ಪ್ರತಿಯೊಬ್ಬರಿಗೂ ಸಮಾನಾವಕಾಶ ಒದಗಬೇಕು ಎಂಬ ತತ್ವ ದೃಷ್ಟಿಯಿಂದ ನಾನು ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ಈಗ ಇದರಲ್ಲಿ ಕೆಲವು ಎಡರು ತೊಡರುಗಳು ಇರಬಹುದು. ಅವುಗಳಿಗೆ ಮುಂದೆ ಅಮೆಂಡ್‌ಮೆಂಟನ್ನು ಕಳುಹಿಸಿ ಅವುಗಳನ್ನು ಸರಿಪಡಿಸುವುದಕ್ಕೆ ಅವಕಾಶ ಇದೆ. ಒಂದು ವೇಳೆ ವಿರೋಧ ಪಕ್ಷದವರು ಕಳುಹಿಸತಕ್ಕ ಅಮೆಂಡ್‌ಮೆಂಟ್‌ಗಳನ್ನು ಸರ್ಕಾರದವರು ಒಪ್ಪದೆ ಹೋದರೂ ಕೂಡ ಕಾನೂನಿನಲ್ಲಿ ಎಡರು ತೊಡರುಗಳು ಇದ್ದು ದೇಶದಲ್ಲಿ ಜನಗಳು ಕೂಗಾಡಿದರೆ ಆಗ ಆಡಳಿತ ಪಕ್ಷದವರೆ ಅಮೆಂಡ್‌ಮೆಂಟ್‌ನ್ನು ತರುತ್ತಾರೆ, ಆಗಲಾದರೂ ಕಾನೂನು ತಿದ್ದುಪಡಿ ಆಗೇ ಆಗುತ್ತದೆ. ವ್ಯವಸಾಯ ಮಾಡತಕ್ಕ ಮನುಷ್ಯ ಸ್ವಲ್ಪ ವಿಸ್ತೀರ್ಣವಿರುವ ಜಮೀನಿನಲ್ಲಿ ಹೆಚ್ಚು ಬೆಳೆಯುವುದನ್ನು ಕಲತುಕೊಳ್ಳಬೇಕು. ಶಾಶ್ವತವಾದ ಮತ್ತು ದೈವಿತವಾದ ಸಂಪತ್ತನ್ನು ಉಪಯೋಗ ಮಾಡತಕ್ಕ ಅವಕಾಶ ಮತ್ತು ಅನುಕೂಲಗಳನ್ನು ಮನುಷ್ಯ ನಿರ್ಮಾಣ ಮಾಡಿಕೊಂಡು ಸ್ವಲ್ಪ ಜಮೀನಿನಲ್ಲೇ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅವಕಾಶವಿದೆ. ಭೂಸುಧಾರಣೆಯ ಬಗ್ಗೆ ಮೊದಲು ಜತ್ತಿ ಕಮಿಟಿಯ ರಿಪೋರ್ಟ್ ಆಯಿತು. ಆಗ ಏನು ಸುಧಾರಣೆ ಆಗಿತ್ತೋ ಅದರ ಮೇಲೆ ಪುನಃ ಸೆಲೆಕ್ಟ್ ಕಮಿಟಿಯವರು ಕೆಲವು ಸುಧಾರಣೆಗಳನ್ನು ಮಾಡಿ ಈಗ ಅದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ವ್ಯವಸಾಯ ಮಾಡಿದ ಅನುಭವಸ್ಥರು ಲೆಖ್ಖಾಚಾರ ಹಾಕಿಕೊಂಡು ಒಂದು ಸಂಸಾರದಲ್ಲಿ 5 ಜನ ಇರಲಿ ಅಥವಾ ಇಬ್ಬರೇ ಇರಲಿ ಅವರು ಎಷ್ಟು ಭೂಮಿಯನ್ನು ಸಾಗು ಮಾಡಿ ಬೆಳೆ ಬೆಳೆಯುವುದಕ್ಕೆ ಸಾಧ್ಯ ಎಂಬುದನ್ನು ಲೆಖ್ಖಾಚಾರ ಹಾಕಬೇಕು. ಈಗ ಈ ವಿಧೇಯಕದಲ್ಲಿ ಒಂದು ಸಂಸಾರಕ್ಕೆ 27 ಎಕರೆ ಇರಬಹುದು ಎಂದು ಮಾಡಿದ್ದಾರೆ. ನಾನು ಅದನ್ನು ವಿರೋದ ಮಾಡುತ್ತೇನೆ. ಒಂದು ಎಕರೆ ಭೂಮಿಯನ್ನು ಸಾಗು ಮಾಡುವುದಕ್ಕೆ ಎಷ್ಟೋ ಕಷ್ಟ ಇದೆ. ವ್ಯವಸಾಯ ಮಾಡತಕ್ಕವನಿಗೆ ಸಾಕಷ್ಟು ಶಕ್ತಿ ಬೇಕು, ಎತ್ತು ಬೇಕು, ಗೊಬ್ಬರ ಬೇಕು, ಸಕಾಲದಲ್ಲಿ ಮಳೆ ಬರಬೇಕು, ಒಂದು ವೇಳೆ ಮಳೆ ಬರಲಿಲ್ಲ ಎಂದರೆ ಬಾವಿಯನ್ನು ತೋಡಿ, ನೀರೆತ್ತಿ ಬೆಳೆಯನ್ನು ಬೆಳೆಯಬೇಕು. ಇಷ್ಟೆಲ್ಲಾ ಕಷ್ಟವಿದೆ. ಇದನ್ನೆಲ್ಲಾ ಲೆಖ್ಖಾಚಾರ ಹಾಕಿಕೊಂಡು ಒಂದು ಸಂಸಾರಕ್ಕೆ ಎಷ್ಟು ಎಕರೆ ಜಮೀನು ಇರಬೇಕು ಎಂಬುದನ್ನು ನಿರ್ಧಾರ ಮಾಡಬೇಕು.

ಧಾರ್ಮಿಕ ಸಂಸ್ಥೆಗಳ ವಿಚಾರದಲ್ಲಿ ಹೇಳುವುದಾದರೆ ಅತಿ ಮುಖ್ಯವಾಗಿ ಯಾವ ಯಾವ ಧಾರ್ಮಿಕ ಸಂಸ್ಥೆಗಳು ಪಾಠಶಾಲೆ, ಇನ್ಸ್ಟಿಟ್ಯೂಷನ್, ಮತ್ತು ಹಾಸ್ಟಲುಗಳನ್ನು ನಡೆಸುತ್ತಿವೆಯೋ ಇಂಥಾ ಧಾರ್ಮಿಕ ಸಂಸ್ಥೆಗಳೆಲ್ಲವೂ ಕೂಡ ಇವೊತ್ತಿನ ದಿವಸ ಭೂಮಿಯಿಂದ ಬಂದ ಒಂದು ವರಮಾನದಿಂದ ಆ ಒಂದು ಕಾರ್ಯವನ್ನು ಅವುಗಳು ನಿರ್ವಹಿಸುತ್ತಿವೆ. ಇಂಥಾ ಒಂದು ಕೆಲಸವೂ ಕೂಡ ಸರ್ಕಾರದವರು ಮಾಡತಕ್ಕ ಕೆಲಸವೇ ಆಗಿದೆ. ಆ ಕೆಲಸವನ್ನು ಈ ದಿವಸ ಧಾರ್ಮಿಕ ಸಂಸ್ಥೆಗಳು ಮಾಡುತ್ತಾ ಇವೆ. ಆದ್ದರಿಂದ ಧಾರ್ಮಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸಕ್ಕೋಸ್ಕರ ದೇಶದ ಅಭಿವೃದ್ಧಿಗೋಸ್ಕರ ಒಂದು ಸತ್ಕಾರ್ಯ ನಡೆದ ಪಕ್ಷದಲ್ಲಿ ಅವುಗಳಿಗೆ ಒಂದು ಮಿತಿಯ ಸೀಲಿಂಗ್ ಅನ್ನು ಹಾಕತಕ್ಕದ್ದು ಯುಕ್ತವಲ್ಲ.

ಶ್ರೀ ಕವಿದಾಸ್ ಮಾಜಪ್ಪ.—ಗೇಣಿ ಮಾಡುವವರು ಏನು ಮಾಡಬೇಕು ?

ಶ್ರೀ ಬಿ. ಎಸ್. ಶಂಕರಪ್ಪ.—ಗೇಣಿದಾರರು ಗೇಣಿಯನ್ನು ಮಾಡಿ ಉತ್ಪನ್ನವನ್ನು ಧಾರ್ಮಿಕ ಸಂಸ್ಥೆಗಳಿಗೆ ಕೊಡಲಿ. ಸಾಮಾನ್ಯವಾಗಿ ಈಗ ಧಾರ್ಮಿಕ ಸಂಸ್ಥೆಗಳು ಹೆಚ್ಚಿಗೆ ಜಮೀನನ್ನು ಗೇಣಿಗೆ ಕೊಟ್ಟು ಅದರಿಂದ ಬರತಕ್ಕ ಉತ್ಪನ್ನದಿಂದ ಎಜುಕೇಷನ್ ಇನ್ಸ್ಟಿಟ್ಯೂಷನ್‌ಗಳನ್ನೂ, ಹಾಸ್ಟಲುಗಳನ್ನೂ ರನ್ ಮಾಡುತ್ತಿವೆ. ಆದ್ದರಿಂದ ಧಾರ್ಮಿಕ ಸಂಸ್ಥೆಗಳಿಗೆ ವಿನಾಯಿತಿಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

(ಶ್ರೀ ಬಿ. ಎಸ್. ಶಂಕರಪ್ಪ)

ಸ್ವಾಮಿ, ನಾನು ಈಗಾಗಲೇ ಹೇಳಿದ ಹಾಗೆ ಸೀಲಿಂಗ್ 216 ಎಕರೆ ಇಟ್ಟಿರುವುದು ಬಹಳ ಜಾಸ್ತಿ. ಇಷ್ಟು ಜಮೀನನ್ನು ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಈ ಮಸೂದೆಯಲ್ಲಿ gardens, rain fed dry land ಇವೆಲ್ಲವನ್ನು ಒಂದೇ ದರ್ಜೆಗೆ ಸೇರಿಸಲಾಗಿದೆ. ಅಡಕೆ, ತೆಂಗು ಧ್ರುವಫಸಲು ನಮ್ಮಲ್ಲಿ ಬಹಳ ಇದೆ. ಇವಕ್ಕೂ ಮಳೆಯಿಂದಾಗತಕ್ಕ ಹರಳು, ಶೇಂಗಾಯಿ ಮುಂತಾದ ಬೆಳೆಗಳಿಗೂ ಬಹಳ ಅಂತರವಿದೆ. ಇದರಲ್ಲಿರುವಂತೆಯೇ ಇದ್ದರೆ ಬಹಳ ಅನ್ಯಾಯವಾಗುತ್ತದೆ. ತೋಟ ಮತ್ತು ಖುಷ್ಕಿ ಎನ್ನುವುದಕ್ಕೆಲ್ಲ ಸರಿಯಾಗಿ ಅರ್ಥವಿವರಣೆಮಾಡಿ ಪ್ರತ್ಯೇಕ ಮಾಡಬೇಕು. ಇಲ್ಲದಿದ್ದರೆ 216 ಎಕರೆ ಬಹಳ ಜಾಸ್ತಿಯಾಗುತ್ತದೆ. ಒಂದು ಎಕರೆ ತೋಟಕ್ಕಿಂತ ಒಂದು ಎಕರೆ ಹೊಲ ಕಡಿಮೆ. ಖುಷ್ಕಿಯಿಂದ ಹೆಚ್ಚು ವರಮಾನ ಬರುವುದಿಲ್ಲ ಆದರೆ ತೋಟದಿಂದ ಹೆಚ್ಚುವರಮಾನ ಬರುತ್ತದೆ. ಆದುದರಿಂದ ತೋಟಕ್ಕೆ ಖುಷ್ಕಿ rain fed ಜಮೀನಿಗೂ ವ್ಯತ್ಯಾಸ ಮಾಡಿ, ಸರಿಯಾದ ಪರಿಮಿತಿಯನ್ನು ನಿಗದಿ ಮಾಡಿದರೆ, ಸರ್ಕಾರಕ್ಕೆ ಹೆಚ್ಚು ಭೂಮಿ ಸಿಕ್ಕುತ್ತದೆ.

Sri C. M. Arumugham.—Sir, how long are we sitting over this debate?

Sri Kadidal Manjappa.—To-day and to-morrow.

Sri C. M. Arumugham.—Sir, the Deputy Speaker of Lok Sabha some times takes part on important Bills. Will you also take part on this important measure Sir? Let us hear your wonderful speech.

Mr. Deputy Speaker.—I cannot participate in the debate when I am in the Chair.

Sri C. M. Arumugham.—After you come to your seat you may please speak Sir. We have not heard your voice for these 4½ years. *(Laughter)*

Mr. Deputy Speaker.—Members will be hearing my voice whenever I am in the Chair. *(Laughter)*

ಶ್ರೀ ಬಿ. ಎಸ್. ಶಂಕರಪ್ಪ.—ಇನ್ನು ಪರಿಹಾರ ಕೊಡುವ ವಿಚಾರ. ಇದಕ್ಕೆ ಸಂಬಂಧಪಟ್ಟಂತೆ ಈ ಮಸೂದೆಯಲ್ಲಿರುವ ವಿಧಿ ಅಷ್ಟು ಸೂಕ್ತವಲ್ಲ. ಇದರಲ್ಲಿ ನಿಗದಿ ಮಾಡಿರುವಂತೆ ಜಾರಿ ಮಾಡಿದರೆ ಅನ್ಯಾಯವಾಗುತ್ತದೆ. ಪರಿಹಾರ ಕೊಡುವುದರಲ್ಲಿಯೂ slab system ವ್ಯವಸ್ಥೆ ಮಾಡಬೇಕು. fifteen times the value in cash of one-fourth and one-fifth of the gross produce, etc. ಎಂದು ನಿಗದಿ ಮಾಡಲಾಗಿದೆ. ಹತ್ತು ಸಾವಿರ ಬರುವವನಿಗೂ ಇದೇ ಆಧಾರ ಹತ್ತು ಲಕ್ಷ ಬರುವವನಿಗೂ ಇದೇ ಆಧಾರ ವನ್ನಿಟ್ಟುಕೊಂಡರೆ ಅನ್ಯಾಯವಾಗುತ್ತದೆ. ಎಲ್ಲರಿಗೂ ಒಂದೇರೀತಿಯಾಗಿ 15ರಷ್ಟು ಎಂದು ಮಾಡಿರುವುದು ಸರಿಯಲ್ಲ. ಹತ್ತು ಸಾವಿರ ರೂಪಾಯಿ ಒಳಗೆ ಬರುವವರಿಗೇ ಒಂದು ದರ ಅದಕ್ಕೆ ಮೇಲ್ಪಟ್ಟು ಬರುವವರಿಗೇ ಒಂದು ದರವನ್ನು ನಿಗದಿಮಾಡಬೇಕು. ಒಂದು ಲಕ್ಷ, ಎರಡು ಲಕ್ಷ, ಐದು ಲಕ್ಷ ಪರಿಹಾರ ಪಡೆಯುವವರಿಗೆ ಕಡಿಮೆ ಮಾಡಬೇಕು. ಹೆಚ್ಚು ಪರಿಹಾರ ಹೊಂದುವ ಜನರು ಸ್ವತಃ ವ್ಯವಸಾಯಗಾರರಲ್ಲ. ಆ ಭೂಮಿಯನ್ನು ಅಭಿವೃದ್ಧಿ ಮಾಡಿದ ಜನರಿಗೆ, ವ್ಯವಸಾಯಮಾಡಿದ ಜನರಿಗೆ ಸುಲಭವಾಗಿ ಆ ಜಮೀನು ಸಿಕ್ಕಬೇಕಾದರೆ, tiller of the soilಗೆ ಸಿಕ್ಕಬೇಕಾದರೆ, ಪರಿಹಾರ ಎಂಟು ಅಥವಾ ಹತ್ತರಷ್ಟಿರಬೇಕೆಂದು ನಿಗದಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕಾಫಿ, ರಬ್ಬರ್, ಏಲಕ್ಕಿ ಈ ಬೆಳೆಗಳು ಎಲ್ಲ ಕಡೆಯೂ ಬೆಳೆಯುವುದಿಲ್ಲ. ದೈವದತ್ತವಾದ ಅನುಕೂಲಗಳಿರುವ ಕೆಲವು ಜಾಗಗಳಲ್ಲಿ, ಎಂದರೆ, ಗುಡ್ಡ ಪ್ರದೇಶಗಳಲ್ಲಿ ಹೆಚ್ಚು ಮಳೆ ಬೀಳುವ

ಭಾಗಗಳಲ್ಲಿ ಮಾತ್ರ ಬೆಳೆಯಬಹುದೇ ವಿನಾ ಎಲ್ಲೆಲ್ಲಿಯೂ ಎಲ್ಲರೂ ಬೆಳೆಯುವುದಕ್ಕಾಗುವುದಿಲ್ಲ. ಇವನ್ನು ಬೆಳೆಯಲು ಅನುಭವ, ಹೆಚ್ಚು ಬಂಡವಾಳ ಬೇಕು, ಬೆಳೆಯುವ ವಿಧಾನ ತಿಳಿದಿರಬೇಕು. ಈ ಬೆಳೆಗಳನ್ನು ಬೆಳೆಯುವರಿಗೆ ಸರಿಯಾದ ಅನುಕೂಲಗಳಿರಬೇಕು. ಎಷ್ಟು ಖರ್ಚುಮಾಡಿ ಕಾಫಿ ಬೆಳೆ ಹಾಕಿದರೆ ಯಾವಾಗ ಎಷ್ಟು ಉತ್ಪತ್ತಿ ಬರುತ್ತದೆಯೆಂಬುದು ಅನುಭವಶಾಲಿಗಳಿಗೆ ಮೊದಲೇ ಗೊತ್ತಾಗುತ್ತದೆ. ಇದಕ್ಕೆ ವಿನಾಯಿತಿ ಕೊಟ್ಟಿರುವುದರಿಂದ ಸಹಾಯವಾಗುತ್ತದೆ. future acquisitionsಗೆ ಕಾಫಿ ತೋಟಕ್ಕೆ 100 ಎಕರೆ ಮಿತಿಯೆಂದು ನಿಗದಿಯಾಗಿದೆ. ಇದೊಂದು ಜಟಿಲ ಸಮಸ್ಯೆ. ಕಾಫಿ ತೋಟಗಳಲ್ಲಿ ಟೆನೆಂಟ್ಸ್ ಅಥವಾ ಗೇಣಿದಾರರಿರುವುದು ಕಡಮೆ. ಕೂಲಿಗಾರರನ್ನಿಟ್ಟು ಕೆಲಸಮಾಡಿಸುತ್ತಾರೆ. ಅಡಿಕೆ, ತೆಂಗು ವ್ಯವಸಾಯವನ್ನು ಕೂಲಿಯವರನ್ನಿಟ್ಟು ಸಾಮಾನ್ಯವಾಗಿ ಮಾಡಿಸುವುದಿಲ್ಲ ವಾದುದರಿಂದ ಇವಕ್ಕೇನೋ ವಿನಾಯಿತಿ ಬೇಕಿಲ್ಲ. ಆದರೆ ಕಾಫಿ ತೋಟ ಒಂದು ಸಾವಿರ ಎಕರೆಯಿದ್ದರೂ ಕೂಲಿಯವರನ್ನಿಟ್ಟು ಕೆಲಸ ಮಾಡಿಸುತ್ತಾರೆ. ಆದುದರಿಂದ future acquisitionsಗೂ ಸೀಲಿಂಗ್ ಇರಬಾರದು. ಅಲ್ಲದೆ ಇದು ಡಾಲರ್ ಗಳಿಸುವ ಬೆಳೆ.

ಯಾವುದಾದರೂ ಜಮೀನನ್ನು ಹಾಳು ಬಿಟ್ಟರೆ, ಅಸಿಸ್ಟೆಂಟ್ ಕಮೀಷನರು ಆ ಜಮೀನನ್ನು ಗೇಣಿಗೆ ಕೊಡುತ್ತಾರೆ. ಮತ್ತೆ ಅದನ್ನು ಮಾಲೀಕನಿಗೆ ವಾಪಸು ಕೊಡಬೇಕಾದರೆ ನಾಲ್ಕು ವರ್ಷದ ಕಂದಾಯವನ್ನು ಅವನಿಂದ ತೆಗೆದುಕೊಂಡು ವಾಪಸು ಮಾಡತಕ್ಕದ್ದೆಂದು ಮಾಡಿದ್ದಾರೆ. ಇದು ಸರಿಯಲ್ಲ. ವ್ಯವಸಾಯೋತ್ಪನ್ನಗಳಿಗೆ ಇಷ್ಟು ಹೆಚ್ಚು ಬೆಲೆಯಿರುವ ಈ ಕಾಲದಲ್ಲಿ ಜಮೀನನ್ನು ಹಾಳುಬಿಡುವವರು ಹೆಚ್ಚು ಜಮೀನಿರುವವರು ಮತ್ತು ವ್ಯವಸಾಯದಲ್ಲಿ ಶ್ರದ್ಧೆಯಿಲ್ಲದಿರುವವರು. Block cotton soil ಇರುವ ಪ್ರದೇಶದಲ್ಲಿ ಹೀಗೆ ಯಾರಾದರೂ ಜಮೀನನ್ನು ಹಾಳು ಬಿಟ್ಟಿದ್ದರೆ ಅದನ್ನು ಸರ್ಕಾರ ವಶಪಡಿಸಿಕೊಂಡು ಗೇಣಿಗೆ ಕೊಟ್ಟು ಗೇಣಿದಾರ ಆ ಜಮೀನಿನಲ್ಲಿ ಬೆಳೆದುಕೊಂಡಿರುವ ಗರಿಕೆಯನ್ನೆಲ್ಲಾ ತೆಗೆದು ಹಣ ಹಾಗೂ ತನ್ನ ಶ್ರಮವನ್ನು ವ್ಯಯಮಾಡಿ ವ್ಯವಸಾಯ ಮಾಡುತ್ತಿದ್ದರೆ ಅದನ್ನು ಮತ್ತೊಮ್ಮೆ ಮಾಲೀಕನಿಗೆ ಕೊಡುವಾಗ ಗೇಣಿದಾರನಿಗೆ ಏನೂ ಪರಿಹಾರವಿಲ್ಲದೇ ಹೋದರೆ ನ್ಯಾಯವಲ್ಲ. ಈ ಸಂಬಂಧವಾಗಿ ನಮ್ಮ ಪಕ್ಷದವರು ಒಂದು ತಿದ್ದುಪಡಿಯನ್ನು ತರುತ್ತಾರೆ, ಆಗ ವಿವರವಾಗಿ ಹೇಳುತ್ತೇನೆ. ಅಂತೂ ಇಂತೂ ಗೇಣಿದಾರನಿಗೆ ಅನುಕೂಲವಾಗುವ ಹಾಗೆ ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಲ್ಲಕ್ಕಿಂತ ಹೆಚ್ಚಾಗಿ ಈ ಮಸೂದೆ ಕಾನೂನಾದ ಮೇಲೆ ಜಾರಿಗೆ ಬರುತ್ತದೆ ಯೆಂಬ ಬಗ್ಗೆ ಖಾತ್ರಿಯೇನು?

Sri C. J. MUCKANNAPPA.—Sir, I rise to a point of order. Discussion is going on without the presence of Government. Though the Deputy Minister is here, he is not part and parcel of the Government. The joint responsibility lies only with the Cabinet Ministers and the Deputy Minister is not a Member of the Cabinet. He can sit here and answer questions but, he cannot take the responsibility of the Government. May I know whether in the absence of the Government, it is relevent to discuss a Bill like this?

Mr. DEPUTY SPEAKER.— "Minister" means a member of the Council of Ministers and includes a Deputy Minister.

Sri C. J. MUCKANNAPPA.—This is a different thing. Supposing there is no full-fledge Minister when the House is discussing the Budget. Will it satisfy the rules?

Mr. DEPUTY SPEAKER.—Please read the rules. What is the use of raising objections without reading the rules ?

Sri C. J. MUCKANNAPPA.—Sir, it goes against the very ruling of the Hon'ble Chair Sir. If you give me a little time, I will produce that ruling Sir.

Mr. DEPUTY SPEAKER.—He is also attending the meetings of the Council of Ministers.

Sri M. C. NARASIMHAN.—The Speaker has held previously that the concerned Minister should be present with the Bill relating to him is discussed. You will see that the entire benches are vacant on the Government side.

Mr. DEPUTY SPEAKER.—The Hon'ble Minister was here just now. He has just gone and will be back in one or two minutes.

Sri M. C. NARASIMHAN.—Now that the matter has been raised, please pardon me even in Lok Sabha the Speaker has found it necessary to point out umpteem times the necessity for the Minister concerned being present. I was not able to be understand Sri M. N. Naghnoor. I thought he was just an ordinary Congress Member.

Sri KADIDAL MANJAPPA.—I should have at least five minutes.

4-30 P.M.

ಶ್ರೀ ಬಿ. ಎಸ್. ಶಂಕರಪ್ಪ.—ಆದ್ದರಿಂದ ಸರ್ಕಾರದವರು ಮಾಡತಕ್ಕ ಈ ಕಾನೂನನ್ನು ಕಾರ್ಯರೂಪಕ್ಕೆ ತರುವುದಿಲ್ಲ ಎಂದು ನಂಬಿಕೆ ನನಗೆ ಪೂರ್ಣವಾಗಿದೆ. ಕಾರಣ ನಮ್ಮ ಅನುಭವದಲ್ಲಿರುವಂತೆ ಕೆಲವು ಕಾನೂನುಗಳನ್ನು ಪಾಸ್ ಮಾಡಿದ್ದಾಗಿದೆ.

ಶ್ರೀ ಟಿ. ಹನುಮಯ್ಯ.—ಕಾಂಗ್ರೆಸ್ ಗವರ್ನ್‌ಮೆಂಟ್ ಬರುವುದಿಲ್ಲ ಎಂದು ಹೇಳುತ್ತಿದ್ದೀರಿ, ಈಗ ಬಂದಿದೆ. ಅದೇ ರೀತಿ ಈ ಕಾನೂನು ಸಹ ಜಾರಿಗೆ ಬಂದೇ ಬರುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಇವತ್ತು ಏನಾಗಿದೆ ಎಂದರೆ ಈ ಕಾನೂನು ಜಾರಿಗೆ ಬರುತ್ತದೆ, ಬರುವುದಿಲ್ಲ ಎಂದು ಹೇಳಿ ಅನೇಕ ರೀತಿಯಲ್ಲಿ ಜನರು ಹೇಳುತ್ತಿದ್ದಾರೆ. ಈ ಕಾನೂನು ಬರುತ್ತದೆ ಎಂಬುದನ್ನು 3 ವರ್ಷ, 4 ವರ್ಷ ಮುಂಚಿತವಾಗಿ ಹೇಳಿ ಇದುವರೆಗೂ ಜಾರಿಗೆ ತರದೆ ಇರುವುದರಿಂದ ಈ ಕೆಲಸವಾಗುವುದಿಲ್ಲ. ಮಿಗಿಲಾಗಿ ಅನೇಕ ಜನ ದೊಡ್ಡ ದೊಡ್ಡ ಭೂಮಾಲಿಕರು ಟೆನೆಂಟುಗಳನ್ನು ಆಚೆಗೆ ಓಡಿಸಿ ತಮ್ಮ ಜಮೀನನ್ನು ಇತರರಿಗೆ ಮಾರಿಕೊಂಡಿದ್ದಾರೆ. ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಭೂಸುಧಾರಣೆ ಬರುತ್ತದೆ, ಸಂಪೂರ್ಣವಾಗಿ ತೊಂದರೆಯಾಗುತ್ತದೆ ಎಂಬುದನ್ನು ತಿಳಿದುಕೊಂಡು ಪರಭಾರೆ ಮಾಡಿರುವಾಗ ಕಾನೂನು ಏಕೆ ತರಬೇಕು ? ಏನು ಸಾರ್ಥಕವಾಗುತ್ತದೆ ? ವಿಲೇಜ್ ಪಂಚಾಯತ್ತು ಕಾನೂನು ಜಾರಿಗೆ ತಂದಿರಿ. ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಪಂಚಾಯತ್ತಿಯ ಸೆಕ್ರೆಟರಿ ಇದ್ದ ಹಾಗೂ ಇಲ್ಲ. ಇಲ್ಲದ ಹಾಗೂ ಇಲ್ಲ. ಆದ್ದರಿಂದ ಸರ್ಕಾರದವರು ಕಾನೂನು ಜಾರಿಗೆ ತರಬೇಕಾದರೆ ಅದನ್ನು ಜಾರಿ ಮಾಡಬೇಕಾದ ಎಕ್ವಿಪ್‌ಮೆಂಟ್ ಸರಿಯಾಗಿ ಮಾಡಿಕೊಂಡು ತಂದಿದ್ದರೆ ಚೆನ್ನಾಗಿರುತ್ತಿತ್ತು. ಇದು ಬಹಳ ಮುಖ್ಯವಾದ ಮಸೂದೆ. ಈ ಕಾನೂನನ್ನು ಧೈರ್ಯ ಇದ್ದರೆ ಚುನಾವಣೆಗೆ ಮುಂಚೆಯೆ ಜಾರಿಗೆ ಕೊಡಬೇಕು ಈಗಲಾದರೂ ಕಾನೂನು ಮಾಡಿ ಜಾರಿಗೆ ಕೊಡಬೇಕೆಂದು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಅಸೆಂಬ್ಲಿಯಲ್ಲಿ ಬಿಲ್ ಪಾಸ್ ಮಾಡುತ್ತೇವೆ. ಆದರೆ ರೂಲ್ಸ್ ಮಾಡಿದ ನಂತರ ಅದನ್ನು ಎರಡು ಸಭೆಗಳ ಮುಂದೂ ತರಬೇಕೆಂದು ಇದ್ದರೂ ಯಾವಾಗಲೋ ತಪ್ಪುತ್ತೀರಿ. ಆ ರೀತಿ ಮಾಡದೆ ಯಾವ ಉದ್ದೇಶದಿಂದ ಈ ಮಸೂದೆ ಬಂದಿದೆಯೋ ಆ ಉದ್ದೇಶವನ್ನು ನೆರವೇರಿಸಲು ರೂಲ್ಸನ್ನು ಜಾಗ್ರತೆಮಾಡಿ ಸಭೆಯ ಮುಂದೆ ತರಬೇಕೆಂದು ಹೇಳಿ ನಾನು ಕುಳಿತುಕೊಂಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಪಿ. ಜಿ. ಸಿದ್ಧಾಂತಿ (ಬಿಜಾಪುರ).—ಸ್ವಾಮಿ, ಈಗ ನಮ್ಮ ಸಭೆಯ ಮುಂದೆ ಇರುವುದು ಜಂಟೀ ಪರಿಶೀಲನಾ ಸಮಿತಿಯ ವರದಿ ಆ ಸಮಿತಿಯಲ್ಲಿ ಏನು ಹೆಚ್ಚುಕಮ್ಮಿ ಮಾಡಿದ್ದಾರೆ ಅದರ ಸಂಬಂಧಿ ಕುರಿತು ಮಾತನಾಡುತ್ತೇನೆ. ಈಗ ಸಮಿತಿಯವರು ಬರೆದದ್ದು ಏನಾಗಿದೆ ಎಂದರೆ ದೊಡ್ಡ ಹಿಡುವಳಿದಾರರಿಗೆ ಹೆಚ್ಚು ಅನುಕೂಲವಾಗಿ ಕೊಟ್ಟಿದ್ದಾರೆ, ಸಣ್ಣ ಹಿಡುವಳಿದಾರರಿಗೆ ಲುಕ್ಸಾನು ಮಾಡಬೇಕೆಂದು ಅವರ ಇರಾದೆ ಇತ್ತೋ ಇಲ್ಲವೋ ಗೊತ್ತಿಲ್ಲ ಅಂತೂ ಪರಿಣಾಮ ಮಾತ್ರ ಸಣ್ಣ ಹಿಡುವಳಿದಾರರ ಹಿತದ ವಿರುದ್ಧ ಮಾಡಿದ್ದಾರೆ. ಅಷ್ಟು ಮಾತ್ರ ಹೇಳುತ್ತೇನೆ. ಅದು ಹೇಗೆಂದರೆ ಪ್ಲಾನಿಂಗ್ ಕಮಿಷನ್ ಅವರು ಮೊದಲಿನಿಂದಲೂ ಹೇಳುತ್ತಾ ಬಂದರು ಆದರೂ ಈಗ ದೊಡ್ಡ ಹಿಡುವಳಿದಾರರ ಸಲುವಾಗಿ 4½ ಹಿಡುವಳಿ ಇರಬೇಕೆಂದು ಮಾಡಿದ್ದಾರೆ. ಅವರು ಕುಟುಂಬ ಹಿಡುವಳಿ ಮೂರರಷ್ಟು ಎಂದರೆ 18 ಸ್ಟ್ಯಾಂಡರ್ಡ್ ಎಕರೆ ಪರಮಾವಧಿ ಹಿಡುವಳಿಯನ್ನು ಗೊತ್ತು ಪಡಿಸಬೇಕೆಂದು ಸೂಚನೆ ಮಾಡಿದ್ದರು. ಈಗ 27 ಸ್ಟ್ಯಾಂಡರ್ಡ್ ಎಕರೆ ಎಂದು ಗೊತ್ತುಮಾಡಿದ್ದೀರಿ. ಎಂದರೆ 3, 9, 27 ಈ ಪ್ರಕಾರ ಆಗಬೇಕು. ಆ ರೀತಿ ಮಾಡದೇ ಸಣ್ಣ ಹಿಡುವಳಿದಾರರಿಗೆ ಮಾತ್ರ ಕಡಿಮೆ ಪ್ರಮಾಣ ಇಟ್ಟು ದೊಡ್ಡ ಹಿಡುವಳಿದಾರರಿಗೆ ಹೆಚ್ಚು ಪ್ರಮಾಣ ಮಾಡಿದ್ದಾರೆ. ಇದು ಒಂದೇ ಅಲ್ಲ. ಮೊದಲು ಜಮೀನು ಎಲ್ಲಿ ಇರುತ್ತದೆಯೋ ಆ ಪ್ರದೇಶದಲ್ಲಿ 10 ಮೈಲಿ ವಿಸ್ತೀರ್ಣದೊಳಗೆ ಆ ವ್ಯವಸಾಯಗಾರ ವಾಸವಾಗಿರಬೇಕೆಂದು ಮಾಡಿದ್ದರು. ಈಗ ಅದನ್ನು ಲೋಪಮಾಡಿದ್ದಾರೆ. ಮುಂಬೈನಲ್ಲಿ ಆದರೂ ಇದ್ದುಕೊಂಡು ಇಲ್ಲಿ ಜಮೀನು ವ್ಯವಸಾಯ ಮಾಡಿಸಬಹುದು. ಮೈಸೂರಿನಲ್ಲಾದರೂ ಇದ್ದುಕೊಂಡು ವ್ಯವಸಾಯ ಮಾಡಿಸಬಹುದು. ದೊಡ್ಡ ಹಿಡುವಳಿ ಮ್ಯಾನೇಜ್ ಮಾಡುತ್ತೇನೆ ಎಂದು ಹೇಳಲಿಕ್ಕೆ ಬರುವ ಹಾಗೆ ಮಾಡಿದ್ದಾರೆ. ಈಗಲಾದರೂ ಸರ್ಕಾರದವರು ಅದನ್ನು ಪರಿಶೀಲನೆ ಮಾಡಿ, ಪ್ಲಾನಿಂಗ್ ಕಮಿಷನ್ ಅವರು ಹೇಳಿದಂತೆ ಮಾಡಿರಿ ಎಂದು ಒತ್ತಾಯಮಾಡುತ್ತೇನೆ. ಎರಡನೆಯದಾಗಿ 2 ರಿಂದ 6, 6 ರಿಂದ 18 ಸ್ಟ್ಯಾಂಡರ್ಡ್ ಎಕರೆ ಇಟ್ಟುಕೊಳ್ಳಬೇಕು. 18 ಕ್ಕಿಂತ ಹೆಚ್ಚು ಇಟ್ಟುಕೊಳ್ಳಬಾರದು. 10 ಮೈಲಿ ವಿಸ್ತೀರ್ಣದೊಳಗೆ ವಾಸವಾಗಿರಬೇಕೆಂದು ಏನು ಬರೆದಿದ್ದರು ಈ ಮಸೂದೆ ಮಾಡುವ ಕಾಲಕ್ಕೆ ಅದನ್ನಾದರೂ ಸರ್ಕಾರದವರು ಒಪ್ಪಿ ಅವರಂತೆ ತಿದ್ದುಪಡಿಮಾಡಿ, ಅದನ್ನು ಇದರಲ್ಲಿ ಅಳವಡಿಸಬೇಕು ಎಂದು ಹೇಳುತ್ತೇನೆ. ಅದು ಬರೋಬರಿ ಆಗುತ್ತದೆ. ಕನಿಷ್ಠ ಕೆಲವು ದಿವಸಗಳ ವರೆಗಾದರೂ ಆ ರೀತಿ ಮಾಡಿದರೆ ಒಳ್ಳೆಯದು.

ಪರಮಾವಧಿ ಹಿಡುವಳಿ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದು ಹೊಸದು. ಪರಮಾವಧಿ ಹಿಡುವಳಿ ಬಗ್ಗೆ ಕೆಲ ಕೆಲವು ಜಮೀನುಗಳಿಗೆ ವಿನಾಯಿತಿ ಕೊಟ್ಟಿದ್ದೀರಿ. ವಿನಾಯಿತಿ ಕೊಟ್ಟ ಜಮೀನನ್ನು ಪರಮಾವಧಿಯಲ್ಲಿ ಹಿಡಿಯುವುದಿಲ್ಲ. ನಾನು ಹೇಳುವುದು ಏನೆಂದರೆ ವಿನಾಯಿತಿಗೆ ಒಳಪಟ್ಟ ಜಮೀನು ಬೇಕಾದಷ್ಟು ಇರಲಿ, 10 ಪಟ್ಟು ಇರಲಿ, ಸಾವಿರ ಎಕರೆ ಪ್ಲಾಂಟೇಷನ್ ಇರಬಹುದು. ಆ ಜಮೀನು ಬಿಟ್ಟು ಇತರೆ ಜಮೀನು ಇದ್ದರೆ ಪರಮಾವಧಿ ಜಮೀನಿನಲ್ಲಿ ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ, ಇದು ಹೊಸ ಸೂಚನೆ ಇದೆ ಮುಂಬೈನಲ್ಲಿ after reorganisation ಅವರು ಒಂದು ಆಕ್ಟ್ ಮಾಡಿದ್ದಾರೆ. ಅದನ್ನು ಓದಿದರೆ ತಿಳಿದುಕೊಳ್ಳಲಿಕ್ಕೆ ಬಹಳ ಬರೋ ಆಗುತ್ತದೆ ಎಂದು ಹೇಳಿ ಸ್ವಲ್ಪ ಓದುತ್ತೇನೆ :

"Where on the appointed day a person holds exempted land along with other land, then if the area of exempted land is

(ಶ್ರೀ ಪಿ. ಬಿ. ಸಿದ್ಧಾಂತಿ)

equal to or more than the ceiling area, he shall not be entitled to hold other land, and if the area of exempted land is less than the ceiling area, he shall not be entitled to hold other land in excess of the area by which the exempted land is less than the ceiling area."

ಈ ರೀತಿ ಮುಂಬಯಿ ಕಾನೂನಿನಲ್ಲಿ ಮಾಡಿಕೊಂಡಿದ್ದಾರೆ. ಸೀಲಿಂಗ್ ಏರಿಯಾಕ್ಕಿಂತ ಹೆಚ್ಚಿಗೆ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಬರುವದಿಲ್ಲ. ಆದರೆ ಈಗ ಈ ಮಸೂದೆಯ ಪ್ರಕಾರ well managed farm ಎಂದು 400 ಎಕರೆ ಭೂಮಿಯನ್ನೂ ಮತ್ತು 216 ಎಕರೆ ಭೂಮಿಯನ್ನೂ ಅಂದರೆ ಒಟ್ಟಿಗೆ 616 ಎಕರೆ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಪರವಾನಗಿ ಕೊಟ್ಟುಬಿಟ್ಟಿದ್ದಾರೆ. Exempted land ಇದ್ದರೆ ಅದು ಸೀಲಿಂಗ್ ಪರಮಾವಧಿಯಲ್ಲಿ ಬರುವದಿಲ್ಲವೆಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಲೆಕ್ಕ ಹಾಕುತ್ತಿದ್ದಾರೆ. ಇದು ಸರಿಯಾದುದು ಅಲ್ಲ. ಪರಮಾವಧಿ ಹಿಡುವಳಿ ಲೆಕ್ಕ ಮಾಡುವಾಗ್ಗೆ exempted lands ಸಹ ಹಿಡಿದು ಜಾಸ್ತಿಯಾಗುತ್ತಿದ್ದ ಕಡಿಮೆ ಮಾಡಬೇಕು. ಇದನ್ನು ಹೊಸದಾಗಿ ನಾನು ಹೇಳುತ್ತಿರುವೆನೆಂದು ಮಾತ್ರ ಯಾರೂ ತಿಳಿದುಕೊಳ್ಳಬಾರದು. ಮುಂಬಯಿಯ ತಿದ್ದುಪಡಿಯ ಕಾನೂನಿನಲ್ಲಿ ಇದು ಇದೆ. ಈ ಅಂಶವನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ವಿಚಾರ ಮಾಡಿದರೋ ಇಲ್ಲವೋ ಗೊತ್ತಿಲ್ಲ. ಈಗಲಾದರೂ ಇದನ್ನು ಲಕ್ಷಕ್ಕೆ ತೆಗೆದುಕೊಂಡು ಸೂಕ್ತ ತಿದ್ದುಪಡಿ ಮಾಡಬೇಕೆಂದು ನಾನು ವಿನಂತಿ ಮಾಡಿ ಕೇಳಿಕೊಳ್ಳುತ್ತೇನೆ.

ಇದನ್ನು ನೋಡಿದರೆ ನಮಗೆ ಕಂಡುಬರುವುದೇನೆಂದರೆ ದೊಡ್ಡ ಹಿಡುವಳಿದಾರರಿಗೆ ಅಷ್ಟೇ ಫಾಯದೆ ಆಗುವ ರೀತಿಯಲ್ಲಿ ಮಾಡಿದ್ದೀರಿ. ಸಣ್ಣ ಹಿಡುವಳಿದಾರರಿಗೆ ಲುಕ್ಸಾನು ಆಗುವ ಇರಾದೆ ಇದ್ದಹಾಗೆ ಕಾಣುತ್ತದೆ. ಕಲಮು 16 (7) ಪ್ರಕಾರ ಸಂರಕ್ಷಿತ ಕುಳ ಇದ್ದರೂ ಕೂಡ ಅರ್ಧದಷ್ಟು ಜಮೀನು ಬಿಡಿಸಿಕೊಳ್ಳಲಿಕ್ಕೆ ಬರುವ ಹಾಗೆ ಭೂಮಾಲೀಕರಿಗೆ ಅಧಿಕಾರ ಕೊಡಲಾಗಿದೆ. ಇದನ್ನು ಸಣ್ಣ ಹಿಡುವಳಿದಾರರಿಗೆ ಸಹ ಅನ್ವಯಿಸಿದ್ದರೆ ಅಡ್ಡಿಯಿಲ್ಲ. ಆದರೆ 16 (*b*) (i) explanation (*a*) ಒಂದು ಪ್ರೊವಿಜನ್ ಇಡಲಾಗಿದೆ. ಇದನ್ನು ನೋಡಿದರೆ ಏನು ಅನ್ನಿಸುತ್ತದೆ ಅಂದರೆ ದೊಡ್ಡ ಹಿಡುವಳಿದಾರರನ್ನು ಮಣೆ ಹಾಕಿ ಕೂಡಿಸುತ್ತಿದ್ದೀರಿ ಮತ್ತು ಸಣ್ಣ ಹಿಡುವಳಿದಾರರನ್ನು ಹೊರಗೆ ಹಾಕುತ್ತಿದ್ದೀರಿ. ಎಂಬುದು ವರದಿಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಇನ್ನು ಗೇಣಿಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಕಂದಾಯದ ಐದು ಪಟ್ಟಿಗೆ ಹೆಚ್ಚಿಗೆ ಇರಬಾರದು. ಎಂದು ಹೇಳಿದೆ. ಅದನ್ನು ಕೈಬಿಟ್ಟಿದ್ದಾರೆ. ಕೊನೆಯ ಪಕ್ಷ ಮುಂಬಯಿ ಕಾನೂನ ಪ್ರಕಾರವಾದರೂ ಇದನ್ನು ಮಾಡಿದ್ದರೆ ಅಡ್ಡಿಯಿರಲಿಲ್ಲ. ರೈತನಿಗೆ ತೊಂದರೆಯಾಗುತ್ತದೆ. ಇದರ ಪರಿಣಾಮ ಏನಾಗುತ್ತದೆ ಎಂದರೆ ದೊಡ್ಡ ಹಿಡುವಳಿದಾರರಿಗೆ ಅನುಕೂಲವಾಗುತ್ತದೆ. ಸಣ್ಣ ಹಿಡುವಳಿದಾರರಿಗೆ ಹಾನಿಯಾಗುತ್ತದೆ. ಇನ್ನು 37 ಕ್ಲಾಜ್ ತೆಗೆದುಹಾಕಿ 32 ಕ್ಲಾಜ್ ಹಾಕಿದ್ದಾರೆ. ಇದನ್ನು ಸರಿಯಾಗಿ ತಿದ್ದುಪಡಿ ಮಾಡಬೇಕು ಎಂದು ವಿನಂತಿ ಮಾಡಿ ಕೇಳಿಕೊಳ್ಳುತ್ತೇನೆ.

ಇನ್ನು ಷೆಡ್ಯೂಲ್ ವಿಚಾರ ಒಂದು ಮಾತು ಹೇಳುತ್ತೇನೆ. ಕಂದಾಯದ ಮೇಲೆ ಗೊತ್ತು ಮಾಡುವಾಗ್ಗೆ ಸರ್ವೆ ಆಗಿದೆಯೋ ಇಲ್ಲವೋ ಎಂಬುದನ್ನು ವಿಚಾರ ಮಾಡಿಲ್ಲ. ವಿಜಾಪುರ ಜಿಲ್ಲೆಯಲ್ಲಿ ಮೂರು ಆಣೆ ನಾಲ್ಕು ಆಣೆ ಒಂದು ರೂಪಾಯಿ ಕಂದಾಯ ಕೊಡುವ ಭೂಮಿಗಳಿವೆ. 25 ಇಂಚು ಮಳೆ ಪ್ರಮಾಣ ಇಟ್ಟುಕೊಂಡು ಎಲ್ಲಾ ಜಮೀನನ್ನು ಸಾಮಾನ್ಯವಾಗಿ ಒಂದೇ ರೀತಿಯಾಗಿ ಗೊತ್ತುಮಾಡಿದ್ದಾರೆ. ಈ ರೀತಿ ಸರಾಸರಿ ತೆಗೆದುಕೊಂಡಿರುವುದು

ಸರಿಯಾಗಿಲ್ಲ. ನದಿಯನ್ನು ದಾಟುವಾಗ್ಗೆ ನೀರಿನ ಆಳವನ್ನು ಕಂಡುಹಿಡಿಯುವುದಕ್ಕೆ ಪ್ರಾರಂಭದಲ್ಲಿ ಮಧ್ಯದಲ್ಲಿ ಕೊನೆಯಲ್ಲಿ ಇರುವ ಆಳವನ್ನು ತೆಗೆದುಕೊಂಡು ಒಂದು ಸರಾಸರಿ ಪ್ರಮಾಣ ತೆಗೆದು ನದಿ ದಾಟುವುದಕ್ಕೆ ಹೋದರೆ ಮಧ್ಯದಲ್ಲಿ ಬಂದಾಗ್ಗೆ ಮುಳುಗಿಹೋಗುವ ಹಾಗೆ ಈ ಸರಾಸರಿ ಪ್ರಮಾಣ ತೆಗೆದುಕೊಂಡಿರುವುದು ಆಗಿದೆ. ವಿಜಾಪುರ ಜಿಲ್ಲೆಗೆ ಹೊಂದಿಕೊಂಡಿರುವ ಸೊಲ್ಲಾಪುರ ಜಿಲ್ಲೆಯಲ್ಲಿ ಮುಂಬಯಿ ಕಾನೂನಿನ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲಿ ಭೂಮಿಯ ಉತ್ಪತ್ತಿಯ ಮೇಲೆ ಭೂಮಿಯನ್ನು ವರ್ಗೀಕರಣ ಮಾಡಿದ್ದಾರೆ. ಅದೇ ರೀತಿಯಾದ classification of lands ಮಾಡುವುದು ಅಗತ್ಯವಾಗಿದೆ. ಕಂದಾಯದ ಮೇಲೆ ಇದನ್ನು ಗೊತ್ತುಮಾಡುವುದು ಸರಿಯಾದುದು ಆಗುವುದಿಲ್ಲ. ಭೂಮಿಯಲ್ಲಿ ಉತ್ಪತ್ತಿ ಎಷ್ಟು ಬರುತ್ತದೆ ಎಂಬುದನ್ನು ಲಕ್ಷ್ಯಕ್ಕೆ ತೆಗೆದುಕೊಂಡು ವರ್ಗೀಕರಣ ಮಾಡುವುದು ಸರಿಯಾದುದು.

ಶ್ರೀ ಕವಿದಾಳ್ ಮಂಜಪ್ಪ.—ಒಂದೇ ಗ್ರಾಮದಲ್ಲಿ ಒಂದು ಜಮೀನಕ್ಕೂ ಇನ್ನೊಂದು ಜಮೀನಕ್ಕೂ ವ್ಯತ್ಯಾಸವಿರುವುದಿಲ್ಲವೇ ?

ಶ್ರೀ ಪಿ. ಜಿ. ಸಿದ್ಧಾಂತಿ.—ಆ ರೀತಿ ಇರುತ್ತದೆ. ಆದರೆ ಎಲ್ಲಿ classification ಮಾಡಿದ್ದಾರೆಯೋ ಅಲ್ಲಿ ಅದಕ್ಕೆ ಅನುಗುಣವಾಗಿ ಏಕೆ ಮಾಡಬಾರದು ? ಬೆಳಗಾಂ ಜಿಲ್ಲೆಯಲ್ಲಿ classification of lands ಮಾಡಿದ್ದಾರೆ. classification ಮಾಡಿರುವಲ್ಲಿ ಅದಕ್ಕೆ ಅನುಗುಣವಾಗಿ ಮಾಡಬೇಕು, ಹಳೆಯ ಮೈಸೂರು ಭಾಗದಲ್ಲಿ classification of lands ಮಾಡಿಲ್ಲ. ನಮ್ಮ ಕಡೆ ಮಾಡಿದ್ದಾರೆ. ಈ ದೃಷ್ಟಿಯಿಂದ ಸರ್ಕಾರ ಈ ಅಂಶಗಳನ್ನೆಲ್ಲ ವಿಚಾರ ಮಾಡಿ ಯಾವ ರೀತಿಯಾಗಿ ಭೂಮಿಯನ್ನು ವಿಂಗಡಿಸಬೇಕು ಎಂಬ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—In the absence of soil survey, ಯಾವ ಯಾವ ingredients ತೆಗೆದುಕೊಂಡು classify ಮಾಡಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಪಿ. ಜಿ. ಸಿದ್ಧಾಂತಿ.—ಕ್ಲಾಸಿಫಿಕೇಷನ್ ಹೇಗೆ ಮಾಡಬೇಕು ಎನ್ನುವುದಕ್ಕೆ ಒಂದು ಪುಸ್ತಕವಿದೆ. ನಾನು ಅದನ್ನು ಇಲ್ಲಿ ಓದಲಾರೆ. ತಾವು ಓದಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ.—ಸೀಲಿಂಗ್ ಲಿಮಿಟ್ ಗೊತ್ತುಮಾಡುವಾಗ ಬೊಂಬಾಯಿ ಕರ್ಣಾಟಕದಲ್ಲಿ classification ಮಾಡಿರುವ ಪ್ರಕಾರವೂ, ಹಳೆಯ ಮೈಸೂರಿನಲ್ಲಿ ಮಳೆಯ ಆಧಾರದ ಮೇಲೆಯೂ ತೆಗೆದುಕೊಂಡರೆ ವ್ಯತ್ಯಾಸವಾಗಬಹುದು.

ಶ್ರೀ ಪಿ. ಜಿ. ಸಿದ್ಧಾಂತಿ.—ನೀವು ಮಳೆಯ ಆಧಾರದ ಮೇಲೆ ತೆಗೆದುಕೊಂಡದ್ದು ತಪ್ಪು ಎಂದು ಹೇಳುತ್ತಿಲ್ಲ, ಹೆಚ್ಚು ಕಡಮೆ ಮಾಡುವುದಕ್ಕೆ ಸರ್ಕಾರ ಅಧಿಕಾರವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ.

Sri C. J. MUCKANNAPPA.—Why do you land us in confusion ? I want to know clearly whether we shall take into consideration the rainfall, or fertility of the land or what other ingredients ? Why are you condemning the Select Committee nnnecessarily ?

Sri P. G. SIDHANTI.—I am not condemning it. I am trying to improve it. ನೀವು ಮಳೆಯ ಆಧಾರದ ಮೇಲೆ ತೆಗೆದುಕೊಳ್ಳಬೇಡಿ ಎಂದು ಹೇಳುವುದಿಲ್ಲ. ಅದರೊಳಗೆ ಜಮೀನು ವರ್ಗಣಿ ಮಾಡುವುದಕ್ಕೆ classification of lands ಸಹ ಲಕ್ಷ್ಯದಲ್ಲಿ ತೆಗೆದುಕೊಳ್ಳಿ. ಹಾಗೆ ಮಾಡದೆ, ಈಗ ಏನು ಮಾಡಿದ್ದೀರೋ ಅದು ಬರೋಬರಿ ಅಲ್ಲವೆಂದು ಹೇಳುತ್ತೇನೆ. ವರ್ಗಾವರ್ಗಿ ಮಾಡುವ ಕಾಲಕ್ಕೆ ಯಾವ ಯಾವ ವರ್ಗದಲ್ಲಿ ಯಾವ ಯಾವ ಕಡೆ ಎಷ್ಟೆಷ್ಟು ಪರಮಾವಧಿ ಇಡುವಳಿ ಇರಬೇಕು ಎಂಬುದನ್ನು ನಿಶ್ಚಿತ ಮಾಡಿ.

ಅವಿವಾಹಿತ ಸ್ತ್ರೀ, ವಿಧವಾ ಸ್ತ್ರೀ, ಇವರಿಗೆಲ್ಲ ವಿನಾಯಿತಿ ಕೊಡಬೇಕೆಂದು ಅನೇಕರು ಈಗಾಗಲೇ ಹೇಳಿದ್ದಾರೆ. ನಾನೂ ಸಹ ಇವರಿಗೆ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಮಾಣಿಕಪ್ಪ.—ಉಳುವವನೇ ಹೊಲದ ಒಡೆಯನಾಗಬೇಕೆಂದು ಈ ಬಿಲ್ ತಂದಿದ್ದಾರೆ. ಅವಿವಾಹಿತ ಸ್ತ್ರೀಯರಿಗೆ ಮತ್ತು ಇತರರಿಗೆ ಗೇಣಿಗೆ ಕೊಡಲು ಅವಕಾಶವನ್ನು ಮಾಡಿದರೆ ಪುನಃ ಗೇಣಿಯನ್ನು ಅಳವಡಿಸಿದಂತಾಗುತ್ತದೆ.

ಶ್ರೀ ಪಿ. ಜಿಸಿದ್ದಾರ್ಥಿ.—ಇಂಥವರು ಬಹಳ ಮಂದಿ ಇರುವುದಿಲ್ಲ. ಗೇಣಿಗೆ ಕೊಡುವುದನ್ನು ಇವೊತ್ತಿನ ದಿವಸ ಬಂದ್ ಮಾಡುವುದಿಲ್ಲ.

ನಮ್ಮ ಕಡೆ ಕೆಲವು ವರ್ಗದ ಇನಾಂದಾರರು ಆರು ಪಟ್ಟು ತುಂಬಿ ಸರ್ಕಾರದ ಕಡೆಯಿಂದ ಜಮೀನನ್ನು ತೆಗೆದುಕೊಂಡಿದ್ದಾರೆ. ಇಂಥ ಭೂಮಿ ವಿಧವೆಯರ ಕಡೆ ಇದೆ. ಆ ಭಾಗದ ಇವೊತ್ತಿನ ದಿವಸ ಇರುವ ಕಾಯಿದೆ ಪ್ರಕಾರ ಅವರನ್ನು ಸ್ವಂತ ಸಾಗುವಳಿ ಮಾಡುವವರೆಂದು ಪರಿಗಣಿಸಬೇಕೆಂದು ಇದೆ. ಇಂಥವರನ್ನು ಇವೊತ್ತಿನ ದಿವಸ ಹೊಲವಿಲ್ಲವೆಂದರೆ ಹೊರಗೆ ಹೋಗಬೇಕಾಗುತ್ತದೆ. ಬೆಳಗಾಂ ಡಿವಿಷನ್‌ನಲ್ಲಿ ಏನು ನಡೆಯುತ್ತಿದೆಯೋ ಅದನ್ನು ಹೇಳುತ್ತಿದ್ದೇನೆ. ವಿಧವೆಯರಿಗೂ ಅವಿವಾಹಿತ ಸ್ತ್ರೀಯರಿಗೂ ಗೇಣಿಗೆ ಕೊಡುವುದಕ್ಕೆ ಅವಕಾಶವಿರಬೇಕು.

ಧರ್ಮದ ಮತ್ತು ಶಿಕ್ಷಣ ಸಂಸ್ಥೆಗಳಿಗೆ ವಿನಾಯಿತಿ ಕೊಡಬೇಕು ಎನ್ನುವ ವಿಚಾರದಲ್ಲಿ ಹೇಳುವುದಾದರೆ ನಮ್ಮ ಸುತ್ತಮುತ್ತಲಿನ ರಾಜ್ಯಗಳಲ್ಲಿ ಇವುಗಳಿಗೆ ವಿನಾಯಿತಿ ಕೊಟ್ಟಿದ್ದಾರೆ. ಅದೇ ಪ್ರಕಾರ ನೀವು ವಿನಾಯಿತಿ ಕೊಡಿರಿ. ಹಾಗೆ ಕೊಡುವಾಗ ಗೇಣಿ ಎಷ್ಟು ಕೊಡಬೇಕು ಎಂಬುದನ್ನು ನಿರ್ಧರ ಮಾಡಬೇಕು. ಅದಕ್ಕಿಂತ ಹೆಚ್ಚು ಕೊಡತಕ್ಕದಲ್ಲ. ಜಾಸ್ತಿ ಹೇಳುವುದಕ್ಕೆ ವೇಳೆ ಇಲ್ಲದ್ದರಿಂದ ಇನ್ನು ಹೆಚ್ಚು ಹೇಳದೆ ಧರ್ಮದ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಸೇರಿದ ಜಮೀನುಗಳಿಗೆ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಈ ಸಂಸ್ಥೆಗಳಿಗೆ ಯಾರೂ ಉಂಬಳಿ ಕೊಡುವವರಿಲ್ಲ. ಹಿಂದೆ ಕೊಟ್ಟಿರುವ ಜಮೀನುಗಳನ್ನು ಕಿತ್ತುಕೊಳ್ಳಬೇಡಿ. ಈಗಿರುವಂತೆಯೇ ನಡೆದುಕೊಂಡು ಹೋಗಲಿ ಎಂದು ವಿನಂತಿ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ಕಳೆದ ಐದು ವರ್ಷಗಳಿಂದ, ಈ ಅಸೆಂಬ್ಲಿ ಪ್ರಾರಂಭವಾದಾಗಿನಿಂದ, ಈ ವಿಚಾರ ಜತ್ತಿ ಕಮಿಟಿ ಮೂಲಕ ಒಂದು ಅಸೆಂಬ್ಲಿ ಮುಗಿಯುವ ವೇಳೆಗೆ ಸೆಲೆಕ್ಟ್ ಕಮಿಟಿಯ ರಿಪೋರ್ಟಿನೊಂದಿಗೆ ಈ ವರದಿಯನ್ನು ತಂದಿರುವುದನ್ನು ನೋಡಿದರೆ ನಮ್ಮ ಕಾಲದಲ್ಲಿ ಇದು ಬಂತು ಎಂದು ಹೇಳಿಸಿಕೊಳ್ಳಬೇಕೋ ಏನೋ ಎಂಬ ವಾದ ಕಾಣುತ್ತಿದೆಯೇ ವಿನಾ ಇನ್ನೇನು ಕಾಣುತ್ತ ಇಲ್ಲ. ಈ ಬಿಲ್ಲಿನಿಂದ ದೇಶದಲ್ಲಿ ಮಹತ್ತರವಾದ ಕ್ರಾಂತಿ ನಡೆಯುತ್ತದೆ ಎಂದು ಬಹಳ ಜನ ನಿರೀಕ್ಷೆ ಮಾಡಿದ್ದರು. ಆದರೆ ಇಂದು ನೋಡಿದರೆ ಈ ಮಸೂದೆಯಲ್ಲಿ ಯಾವ ಒಂದು ಪ್ರಗತಿಪರ ಮನೋಭಾವನೆಯೂ ಇದ್ದಂತೆ ಕಾಣುವುದಿಲ್ಲವೆಂದು ಬಹಳ ವಿಷಾದದಿಂದ ತಿಳಿಸಬೇಕಾಗಿದೆ.

ಸೀಲಿಂಗ್ ವಿಚಾರ ತೆಗೆದುಕೊಂಡರೆ ಅದರಲ್ಲಿ ಪ್ರಗತಿ ಕಾಣುವುದಿಲ್ಲ. ತೆಗೆದುಕೊಂಡ ಭೂಮಿಯ ಹಂಚಿಕೆಯ ವಿಷಯದಲ್ಲಿಯೂ ಪ್ರಗತಿ ಕಾಣುವುದಿಲ್ಲ. ಇದನ್ನು ಪಾಸ್ ಮಾಡಿ ಜಾರಿಯಲ್ಲಿ ತರೋಣ, ಅದರ ಪರಿಣಾಮ ಜನರಲ್ಲಿ ಉಂಟಾಗಲಿ ಎಂದರೆ; ಅದೂ ಮಾಡಲು ಆಗುವಂತೆ ಕಾಣುವುದಿಲ್ಲ. ಕಾರಣ ಇದಕ್ಕೆ ಸಂಬಂಧಪಟ್ಟಂತೆ ರೂಲ್ಸ್ ಮಾಡಿ ಅದನ್ನು ಸಭೆಯ ಮುಂದೆ ಮಂಡಿಸಬೇಕು. ಸಭೆಯ ಮುಂದೆ ಇಷ್ಟು ದಿನವಿರಬೇಕೆಂಬ ನಿಯಮವಿದೆ. ಅದಾದ ನಂತರ ಜಾರಿಗೆ ಕೊಡಬೇಕು. ನಾವು ಒಂದು ತಿಂಗಳಕಾಲ ಸಭೆ ನಡೆಯುತ್ತೇವೆಂಬ ಭರವಸೆ ಯಾರಿಗೂ ಇರುವುದಿಲ್ಲ. ಹೀಗಾಗಿ ನಾವು ಇದನ್ನು ಈಗ ಪಾಸ್ ಮಾಡಿದರೂ ಜಾರಿಗೆ ಬರಬೇಕಾದರೆ ಬಹಳ ಕಾಲ ಬೇಕು.

ಮೊದಲು ಸೀಲಿಂಗ್ ತೆಗೆದುಕೊಳ್ಳೋಣ. ಇದರ *per capita* ಎಷ್ಟಿದೆ ಎಂದು ನೋಡೋಣ. ಪ್ರಪಂಚದಲ್ಲಿ U.N.O. ನವರ 1951ರ ಸೆನ್ಸಸ್ ಪ್ರಕಾರ ತಲೆ ಒಂದಕ್ಕೆ 1·8 ಎಕರೆ ಜಮೀನು ಇರುತ್ತಿತ್ತು. 1961ರ ಸೆನ್ಸಸ್ ಪ್ರಕಾರ ಅದು 1·8 ರಿಂದ 1·2ಕ್ಕೆ ಇಳಿಯಬಹುದೆಂದು ಕಾಣುತ್ತದೆ. ನಮ್ಮ ದೇಶದಲ್ಲಿ ತೆಗೆದುಕೊಂಡರೆ, ಎರಡು ಕೋಟಿ ಜನರು ಇರುವುದರಲ್ಲಿ, ಜತ್ತಿ ಕಮಿಟಿ

ರಿಪೋರ್ಟ್ ಪ್ರಕಾರ 2 ಕೋಟಿ 60 ಲಕ್ಷ ಎಕರೆ ಜಮೀನು ಸಾಗುವಳಿಯಾಗುತ್ತಿದೆ ಎಂದು ಹೇಳುತ್ತಾರೆ. ಇದನ್ನು ಹಂಚಿದರೆ ತಲೆ ಒಂದಕ್ಕೆ 1·3 ಎಕರೆ ಜಮೀನು ಬರುತ್ತದೆ. ಹೀಗಿರುವಾಗ 27 ಎಕರೆ ಉತ್ತಮವಾದ ಜಮೀನು ಅಥವಾ 216 ಎಕರೆ ಬಹಳ ಕನಿಷ್ಟವಾದ ಜಮೀನು ಪರಮಾವಧಿಯಾಗಿರಬೇಕು ಎಂದು ಹೇಳುವುದರಲ್ಲಿ ಏನು ತತ್ವವಿದೆಯೋ ನನಗಂತೂ ಅರ್ಥವಾಗುವುದಿಲ್ಲ. ಜಮೀನನ್ನು ಹಂಚುವ ವಿಧಾನ ಸಹ ಸರಿಯಾಗಿಲ್ಲ. ವ್ಯವಸಾಯದ ಮೇಲೆಯೇ ಅವಲಂಬಿಸಿರುವ ಜನರನ್ನು ಲೆಕ್ಕ ಹಾಕಿದರೂ ಈ ಮಿತಿಯನ್ನು ಗೊತ್ತುಮಾಡಿರುವುದಕ್ಕೆ ಯಾವ ರೀತಿಯಲ್ಲಿಯೂ ಸರಿಯಾದ ಆಧಾರ ನಮಗೆ ಕಾಣುತ್ತಾ ಇಲ್ಲ. ಮತ್ತು ಇನ್ನೊಂದು ಅಂಶವೇನೆಂದರೆ ಬೇಸಿಕ್ ಹೋಲ್ಡಿಂಗ್ ಏನಿದೆಯೋ ಅದರ ಸೀಲಿಂಗ್ ಲಿಮಿಟ್ ತೆಗೆದುಕೊಂಡರೆ ಅದು 2 ಎಕರೆ, 6 ಎಕರೆ 27 ಎಕರೆ ಯಾಗಬಹುದು 216 ಎಕರೆ ಬೇಕಾದರೂ ಆಗಬಹುದು. ಸೋಶಿಯಲಿಸ್ಟಿಕ್ ಐಡಿಯಾ ಪ್ರಕಾರ, ಇದು ಒಂದಕ್ಕೆ ಹತ್ತರಷ್ಟು ಇರಬಹುದು, ಈ ಪರಮಾವಧಿ ಒಂದಕ್ಕೆ 20 ರಷ್ಟು ಇರಬಹುದು, 20 ಎಕರೆ ಏಕೆ ಮಾಡಬಾರದು ? ಕಡಿದಾಳ್ ಮಂಜಪ್ಪನವರು ಸೆಲೆಕ್ಟ್ ಕಮಿಟಿ ಮುಂದೆ ಹೋರಾಡಿರುವುದು ನೋಡಿದರೆ ಒಂದು ರೂಪಾಯಿ ಹೊರಗೆ ತೆಗೆದುಕೊಳ್ಳಲು, ಸಮುದ್ರವನ್ನೆಲ್ಲಾ ಖಾಲಿ ಮಾಡಿದಂತಿದೆ. ಈ ಭೂಸುಧಾರಣೆಯನು ಇರುವ 2,60,000 ಜಮೀನಿನಲ್ಲಿ 2 ಲಕ್ಷ ಎಕರೆ ಹೆಚ್ಚುವರಿ ಜಮೀನಿನ ಹಂಚಿಕೆಗಾಗಿ ತಂದ್ದಿದ್ದೇವೆಂದು ಹೇಳಿದರೆ ಇದು ನಾಚಿಕೆಗೇಡಿನ ಪ್ರಸಂಗವಲ್ಲವೇ ಎಂದು ಯಾರಾದರೂ ಕೇಳಬೇಕಾಗುತ್ತದೆ. ಏತಕೆಂದರೆ ಯೋಚನೆ ಮಾಡಿದರೆ ಶ್ರೀ ಹನುಮಂತಯ್ಯನವರು ವಿದ್ಯಾದಾನ, ಭೂದಾನ ಸ್ಕೀಮು ಮಾಡಿದ ಹಾಗೆ ಮಾಡಿದ್ದರೆ, ಇದೇ 2 ಲಕ್ಷ ಎಕರೆ ಭೂಮಿ ಒಂದು ಬೀಳುತ್ತಿತ್ತೋ ಇಲ್ಲವೋ ವಿನೋಬಭಾವೆಯನ್ನು ಕರೆಸಿದ್ದರೆ ಅಷ್ಟು ಜಮೀನನ್ನು ಸಂಪಾದಿಸಬಹುದಾಗಿತ್ತು. ಸೆಂಟ್ರಲ್ ಗವರ್ನಮೆಂಟ್ ಸ್ಮಾಲ್ ಸೇವಿಂಗ್ ಸ್ಕೀಮಿನ ಮಿನಿಸ್ಟರು ರಾಜ್ಯದಲ್ಲಿ ಸಂಚಾರಮಾಡಿ ಲಕ್ಷಾಂತರಗಟ್ಟಲೆ ಸ್ಮಾಲ್ ಸೇವಿಂಗ್ಸ್‌ಗೆ ವಸೂಲು ಮಾಡಿದರು. ಹಾಗೆಯೇ ರಾಜ್ಯದಲ್ಲಿ ಒಂದು ತಿಂಗಳು ಸಂಚಾರಮಾಡಿದರೆ 1—2—3 ಲಕ್ಷ ಎಕರೆ ಬಂದು ಬಿಡುತ್ತದೆ. ಹೀಗಿರುವಾಗ ಈ ಬಿಲ್ಲು ತಂದು ಬಿಟ್ಟು ಎರಡು ಲಕ್ಷ ಎಕರೆ ಭೂ ಹೀನರಿಗೆ ಸಂಪಾದನೆ ಮಾಡುತ್ತೇವೆಂದು ಹೇಳಿದರೆ ಇದು ಹಾಸ್ಯಾಸ್ಪದವೇ ಸರಿ 260 ಲಕ್ಷ ಎಕರೆಯಾದರೂ ಬಂದಿದ್ದರೆ ಸರಿ. ಎರಡು ಲಕ್ಷ ಎಕರೆ ತೆಗೆದುಕೊಂಡರೆ ಒಂದು ಪರ್ಸೆಂಟ್ ರೈತರಿಗಾದರೂ ಜಮೀನು ಸಾಕಾಗುತ್ತದೆಯೆ ? ನಮ್ಮ ಜನಸಂಖ್ಯೆ ವಿಮರ್ಶೆ ಮಾಡಿದರೆ 1.2 ಎಕರೆಗಳು ಒಬ್ಬ ಮಂದಿಗೆ ಈ ಬಿಲ್ಲನಿಂದ ಬಂದ ಹಾಗಾಗುತ್ತದೆ. ಇನ್ನೊಂದು ಅಂಶ ಮರೆತಿದ್ದೆ. ಮೊನ್ನೆ ರೆವಿನ್ಯೂ ಮಂತ್ರಿಗಳು ಸುಮಾರು 60 ಲಕ್ಷ ಎಕರೆ ಗೇಣಿದಾರರ ಹೆಸರಿನಲ್ಲಿದ್ದುದು, ಸುಮಾರು 30 ಲಕ್ಷ ಎಕರೆ ಗೇಣಿದಾರರಿಗೆ ಹೋಗುತ್ತದೆಂದು ಹೇಳಿದರು. ಇನ್ನೊಂದು ಅಂಶವೇನೆಂದರೆ ನಮ್ಮಲ್ಲಿ ಇಂಟೆನ್ಸಿವ್ ಕಲ್ಟಿವೇಶನ್ ಯಶಸ್ವಿಯಾಗಬಲ್ಲದೇ ? ಆರಂಭದಲ್ಲಿರುವ ಜನಸಂಖ್ಯೆ ಕಡಿಮೆ ಬೇಕಾದಷ್ಟು ಜಮೀನು ಇದೆ. ನೀವು ಬೊಂಬಾಯಿ ಮದ್ರಾಸು, ಇನ್ನೊಂದು ಕಾಪಿಮಾಡಿ 25 ಎಕರೆ ಕೊಡಬೇಕೆಂದು ಮಾಡಿದ್ದೀರಿ. ಬಾಯಿಬಿಟ್ಟು ಹೇಳುವುದಾದರೆ, ಕಾಂಗ್ರೆಸ್ ಅಧಿಕಾರವೆಂದರೆ ಕೆಲವು ಜನ ಸಾಹುಕಾರರ ಅಧಿಕಾರವೆಂದು ಸಾಮಾನ್ಯ ಜನರು ಮಾತನಾಡಿಕೊಳ್ಳುತ್ತಿದ್ದರು. ನೀವು ಈ ಒಂದು ಬಿಲ್ಲನ್ನು ತೆಗೆದುಕೊಂಡು ಬಂದು ಅದು ಭೂಮಾಲೀಕರ ಹಿತದೃಷ್ಟಿಯಿಂದ ತಂದ ಬಿಲ್ಲೆಂದು ಈ ರೀತಿ ತೋರಿಸಿದ ಪಕ್ಷದಲ್ಲಿ ಜನ ಸಾಮಾನ್ಯರು ಏನು ಮಾತನಾಡಿಕೊಳ್ಳುತ್ತಿದ್ದರೋ ಅದನ್ನು ಕಾರ್ಯತಃ ತೋರಿಸಿದ ಹಾಗಾಗುತ್ತದೆ. ಇದಕ್ಕಿಂತ ಪ್ರಗತಿಗೆ ವಿರೋಧವಾದ ಸುಧಾರಣೆ ಬೇರೆ ಇನ್ನೊಂದಿಲ್ಲ. ಇವತ್ತಿನ ದಿನ ಪ್ರಪಂಚದಲ್ಲಿ ವ್ಯವಸಾಯದಲ್ಲಿ ಜಾಸ್ತಿ ಮುಂದುವರೆದ ದೇಶಗಳನ್ನು ನೋಡೋಣ. ಒಂದು ಎಕರೆಯಲ್ಲಿ ಜಪಾನಿನಲ್ಲಿ ಬೆಳೆಯುವ ಭತ್ತ ಏನಿದೆ ! ಅಲ್ಲಿ ಹಿಡುವಳಿ ಪರಿಮಿತಿ ಏನಿದೆ ? ಹಾಗೆಯೇ ಗೋಧಿಯನ್ನು ಡೆನ್ಮಾರ್ಕಿನಲ್ಲಿ ಜಾಸ್ತಿ ಬೆಳೆಯುತ್ತಾರೆ, ಡೆನ್ಮಾರ್ಕ್ ದೇಶದಲ್ಲಿ ಹಿಡುವಳಿ ಎಷ್ಟು? ಅಲ್ಲಿಗಿಂತ ಇಲ್ಲಿಯೇ ಜಾಸ್ತಿ ಅಲ್ಲೆಲ್ಲಾ ಇಂಟೆನ್ಸಿವ್ ಕಲ್ಟಿವೇಶನ್ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.- ರೇಶ್ ಫಾರ್ ಹೇಗಿದೆ ಅಲ್ಲ ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ರೇಶಫಾರ್ ಒಂದೇ ಮುಖ್ಯವಲ್ಲ. ಮುಕ್ಕಣ್ಣಪ್ಪನವರು ತಮ್ಮ ಅಷ್ಟ ವ್ಯವಸಾಯ ಮಾಡುತ್ತಿದ್ದರೆಂದು ತಾವು ಮಾಡುತ್ತಿದ್ದೇವೆಂದು ತಿಳಿದುಕೊಂಡಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಅಭಿಪ್ರಾಯದಲ್ಲಿ ಸೀಲಿಂಗ್ ಎಷ್ಟಿರಬೇಕು ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—20 ಎಕರೆಗೆ ಜಾಸ್ತಿ ಇರಬಾರದು. 20 ಎಕರೆಯೊಳಗೆ ಎಷ್ಟಾದರೂ ಮಾಡಿಕೊಳ್ಳಿ 15 ಬೇಕಾದರೂ ಮಾಡಿ ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ಪ್ರಕಾರ ಐದನೆಯ ಕ್ಲಾಸಿಗೆ ಕನಿಷ್ಠ ಪರಿಮಿತಿ 216 ಎಕರೆಯಾಗುತ್ತದೆ. ಅದು ನೂರು ಎಕರೆಗೆ ಜಾಸ್ತಿ ಇರಕೂಡದು. ಇದನ್ನು ಐದು ಜನ ಸಂಸಾರಗಳಿಗೆ ಮಾತ್ರ ಮಾಡಿರುವುದು. 5 ಜನಕ್ಕೆ ಜಾಸ್ತಿ ಇರುವ ಸಂಸಾರಗಳಿಗೆ, ಎಂದರೆ 8—9 ಜನರಿದ್ದರೆ, ಒಂದಕ್ಕೆರಡರಷ್ಟು ಆಗುತ್ತದೆ. 432 ಎಕರೆಯಾಗುತ್ತದೆ, ಅಳಿಯಸಂತಾನವಾದರೆ, ಒಂದಕ್ಕೆ ಮೂರರಷ್ಟಾಗಿ 600 ಚಿಲ್ಲರೆ ಎಕರೆಯಾಗುತ್ತದೆ. ಪರಿಮಿತಿ ಇಷ್ಟು ಹೆಚ್ಚು ನಿಗದಿ ಮಾಡಿದರೆ ನಿಮಗೆ ಜಮೀನು ಎಲ್ಲಿಯಾದರೂ ಸಿಗುತ್ತದೆಯೇ ? ನಿಮ್ಮ ಕನಸು ಎಂದಿಗೂ ಸಾಧ್ಯವಿಲ್ಲ. ಈ ಸೀಲಿಂಗ್ ಲಿಮಿಟ್ಟನ್ನು ಜಾಸ್ತಿ ಇಟ್ಟುಕೊಂಡಿರುವುದರಿಂದ ಖಂಡಿತ ಈ ಭೂಸುಧಾರಣೆ ಯಶಸ್ವಿಯಾಗುವುದಿಲ್ಲವೆಂದು ಕಡಿದಾಳ್ ಮಂಜಪ್ಪನವರಿಗೆ ಹೇಳಬೇಕಾಗಿದೆ. 20 ಲಕ್ಷ ಎಕರೆ ಜಮೀನು ಬಂದ ಪಕ್ಷದಲ್ಲಿ ಭೂ ಸುಧಾರಣೆ ಸಾಧ್ಯ. ಇದು ಜಮೀನು ಬೇಕಾಗಿರುವುದರ ಶೇಕಡ 10–20ರಷ್ಟು ಆಗುವುದಿಲ್ಲ. ಕೇವಲ 7–8 ಪರ್ಸೆಂಟ್ ತೆಗೆದುಕೊಂಡರೆ 20 ಲಕ್ಷ ಎಕರೆಗೆ ಬರುತ್ತದೆ. 20 ಲಕ್ಷ ಬೇಕಾದಾಗ ಎರಡು ಲಕ್ಷ ಎಕರೆ ತೆಗೆದುಕೊಂಡರೆ, ಖಂಡಿತವಾಗಿಯೂ ಇದು ಹಾಸ್ಯಾಸ್ಪದ. ಸೀಲಿಂಗ್ ಲಿಮಿಟ್ ಮಾಡುವಾಗ ಕ್ಲಾಸಿಫಿಕೇಷನ್ ಆಫ್ ಸಾಯಿಲ್ ಮಾಡಿರುವ ವಿಧಾನ ತಪ್ಪು, ಮಳೆ ಆಧಾರದ ಮೇಲೆ ಕ್ಲಾಸಿಫಿಕೇಷನ್ ಮಾಡಿದ್ದಾರೆ. ಯಾವ ದೇಶದಲ್ಲಿ ಕೂಡ ಕ್ಲಾಸಿಫಿಕೇಷನ್ ಈ ರೀತಿ ಮಾಡಿಲ್ಲ. ನಿಮ್ಮ ಶೆಡ್ಯೂಲನಲ್ಲಿ 7 ಕ್ಲಾಸಿಫಿಕೇಷನ್ ಅನವಶ್ಯಕ, 5 ಕ್ಲಾಸಿಫಿಕೇಷನ್ ಮಾಡಿ 3-4 ಒಂದು ಮಾಡಿ, 6-7 ಒಂದುಮಾಡಿ ಕೊಡಿಸಬಹುದು. 25 ಇಂಚಿಗೆ ಕಡಿಮೆ ಮಳೆ ಬಿದ್ದರೆ, ಆ ಜಮೀನನ್ನು ಐದನೆಯ ಕ್ಲಾಸಿಗೆ ತಂದಿದ್ದೀರಿ. ಇದು ಅನಾವಶ್ಯಕ. ಬಿಜಾಪುರದಲ್ಲಿ 27 ಇಂಚು ಮಳೆ ಆದರೆ, ಬಂಪರ್ ಕ್ರಾಪ್ ಬರುತ್ತದೆ. 5 ಕ್ಲಾಸಿಫಿಕೇಷನ್ ಇರಬೇಕು. ಪ್ರತಿಯೊಂದು ಕ್ಲಾಸಿಫಿಕೇಶನ್ನಿನಲ್ಲಿಯೂ ಒಂದೊಂದಾಗಿ ಏಕರೇಜ್ ಜಾಸ್ತಿಯಾಗಿ, ಫ್ರಾಕ್ಷನ್ ಆಗಿಬಿಡುತ್ತದೆ. ಮದ್ರಾಸು, ಬೊಂಬಾಯಿ ಕಾಪಿಮಾಡಿದ ಹಾಗಿದೆ. 5 ಕ್ಲಾಸಿಫಿಕೇಶನ್ ಮಾಡಿ ಮೊದಲನೆಯ ದರ್ಜೆಯಲ್ಲಿ ಎರಡನೆಯ ದರ್ಜೆಯಲ್ಲಿ 3 ಎಕರೆ ಮಾಡಿ, ಕನಿಷ್ಠ ತರಹ 1-5ರಷ್ಟು ಮಾಡಿ 25 ಎಕರೆ ಪರಿಮಿತಿ ಇದ್ದರೆ, ಜಮೀನು ಇನ್ನಷ್ಟು ಬರುತ್ತದೆ. ಆಗ ಮಾಡಿದ್ದು ಸಾರ್ಥಕವಾಗುತ್ತದೆ. ಬೇರೆ ಕಡೆ ಕ್ಲಾಸಿಫಿಕೇಶನ್ ಯಾವ ರೀತಿಯಲ್ಲಿ ಮಾಡಿದ್ದಾರೆಂದು ನನ್ನ ಹತ್ತಿರ ಬಂದು ಆರ್ಟಿಕಲ್ ಇದೆ, ಅದನ್ನು ಓದುತ್ತೇನೆ. ನೀವು ಮಳೆ ಕೆರೆ ಆಧಾರ ಇಟ್ಟುಕೊಂಡಿದ್ದೀರಿ. ಒಬ್ಬನ ಜಮೀನಿನಲ್ಲಿಯೇ ಒಂದು ಭಾಗ ಉತ್ತಮವಾಗಿದ್ದು ಇನ್ನೊಂದು ಭಾಗ ಕೀಳು ದರ್ಜೆಯಾಗಿರುತ್ತದೆ. ಒಂದೇ ಜಮೀನು, ಒಬ್ಬನೇ ಮಾಲೀಕ ಹೀಗೆಯೇ ಒಂದು ಎಕರೆಯಲ್ಲಿಯೇ ಅನೇಕ ತರಹ ಗುಣವಿರುತ್ತದೆ. ನೀವು ಮಾಡಿರುವ ಪ್ರಕಾರ ಕ್ಲಾಸಿಫಿಕೇಷನ್ ಮಾಡಿದರೆ, ಶಂಕರಪ್ಪನವರು ಹೇಳಿದ ಹಾಗೆ ಚಿಕ್ಕನಾಯಕನಹಳ್ಳಿಯಲ್ಲಿರುವ ರೈತ 7ನೆಯ ಅಂತಸ್ತಿಗೆ ಬರುತ್ತಾನೆ, 216 ಎಕರೆ ಜಮೀನು ಒಂದು ಕಡೆ ಅಲ್ಲಿ ಯಾರಿಗಾದರು ಬಂದರೆ ಅವರು ಕುಬೇರರಾಗುತ್ತಾರೆ. ಕ್ಲಾಸಿಫಿಕೇಶನ್ನಿನಲ್ಲಿ ಬಹಳ ಮಟ್ಟಿಗೆ ಇದು ಒಂದು ಡಿಫೆಕ್ಟ್. ಫಲವತ್ತಿನ ಯಾವ ಒಂದು ಅಂಶವನ್ನೂ ಲೆಕ್ಕ ಹಾಕದೆ ಕ್ಲಾಸಿಫೈ ಮಾಡಿರುವುದು ತುಂಬಾ ಅಸಮಾಧಾನಕರವಾಗಿದೆ.

> "The way to treat living soils and crops successfully is by skilful, small--scale intensive agriculture by peasants who thoroughly know their land through ownership. In saying this

I do not mean to defend the excessive fragmentation of much farm land in India. That is a very harmful condition. It can and should be corrected... The very high production of whaet per acre in Denmark, Holland and Belgium, for instance, cited earlier in this chapter, is on small farms intensively cultivated by individual farmer proprietors. Indeed, in Denmark, which has the highest production, tne average size of the farms is among the smallest in West Europe. Again, in Japan, which has the highest production of rice per acre, the farms are tiny. By all means let the peasants learn and use science, but a science not of mechanical or inorganic, processes but of living forces."

ಹೀಗೆ intensive cultivationನನ್ನು ವಿಶಾದೀಕರಿದ್ದಾರೆ.

Dr. R. NAGAN GOWDA.—What is the average size?

Sri C. K. RAJAIAH SHETTY.—In Japan it is 10 acres

ಈಗ ತಾವು ಹೇಳಿರುವ ಸೀಲಿಂಗು ಬಹಳ ಜಾಸ್ತಿ, ಇದನ್ನು ಆದಷ್ಟೂ ಕಡಿಮೆ ಮಾಡಬೇಕಾದ ಅವಶ್ಯಕತೆ ಇದೆ. ವ್ಯವಸಾಯ ಮಾಡುವ ಕೆಲಸ ಹೇಗಿರಬೇಕೆಂದರೆ, ಸಾಕಷ್ಟು ಬಂಡವಾಳ ಇರಬೇಕು. ಸಾಕಷ್ಟು ವೈಜ್ಞಾನಿಕ ಅರಿವು ಇರಬೇಕು, ಉತ್ತಮವಾದ ವ್ಯವಸಾಯ ಮಾಡುವ ವಿಧಾನ, ಇವುಗಳಿದ್ದರೆ ಯಶಸ್ವಿಯಾಗುತ್ತದೆ. ಹೀಗೆ ಮಾಡದೆ, ಸುಮ್ಮನೆ, 216 ಎಕರೆ ಹಾಗೂ 436 ಎಕರೆ ಎಂದು ಮಾಡಿಕೊಂಡರೆ, ಇದರಲ್ಲೇನು ಅರ್ಥವಿದೆ. ಕೇಂದ್ರದ ಮಂತ್ರಿಗಳಾದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಒಂದು ಕಡೆ ಭಾಷಣ ಮಾಡುವಾಗ ಪ್ರತಿಯೊಂದು ಎಕರೆಯಲ್ಲಿಯೂ ಉತ್ಪತ್ತಿ ಸುಮಾರು 3,000 ರೂಪಾಯಿಗಳಷ್ಟು ಬರುತ್ತದೆ ಎಂದು ಹೇಳಿದರು. ಇಲ್ಲಿ ಉದಾಹರಣೆಯಾಗಿ ಭತ್ತವನ್ನೇ ತೆಗೆದುಕೊಂಡರೆ ಎಕರೆ ಒಂದಕ್ಕೆ ಸುಮಾರು ಮುನ್ನೂರು ಅಥವಾ ನಾನೂರು ಅಥವಾ ಐನೂರು ರೂಪಾಯಿಗಳಷ್ಟು ಬರುತ್ತದೆ. ಇದರಂತೆ ನೋಡುವುದಾದರೆ ಸಾಕಷ್ಟು ಜಮೀನು ವ್ಯವಸಾಯಕ್ಕೆ ಸಿಗುವುದಿಲ್ಲ ಇದರಿಂದ ನಿರುದ್ಯೋಗ ನಿವಾರಣೆಯಾಗುತ್ತದೆ ಎನ್ನುವುದು ಅರ್ಥವಿಲ್ಲದಂತಾಗುತ್ತದೆ. ಈ ಭೂಶಾಸನವನ್ನೂ ತರುವಾಗ ತಮ್ಮ ಉದ್ದೇಶ ನಿರುದ್ಯೋಗವನ್ನು ನಿವಾರಣೆ ಮಾಡುವುದು, ಮತ್ತು ಹೆಚ್ಚು ಆಹಾರವನ್ನೂ ಉತ್ಪತ್ತಿ ಮಾಡಬೇಕು ಎನ್ನುವುದನ್ನು ಹೇಳಿದಿರಿ ತಮಗೆ ಈಗ ಸಿಕ್ಕುವ ಸುಮಾರು ಎರಡು ಲಕ್ಷ ಎಕರೆಯಷ್ಟು ಜಮೀನಿನಿಂದ ನಿರುದ್ಯೋಗ ನಿವಾರಣೆಯಾಗುತ್ತದೆಯೇ? ಎಂದು ಕೇಳಬೇಕಾಗಿದೆ. ಹೀಗೆ 500-600 ಎಕರೆಯಷ್ಟು ಜಮೀನು ಇಟ್ಟುಕೊಂಡು ತಾವು ಎಷ್ಟರ ಮಟ್ಟಿಗೆ ಹೆಚ್ಚು ಆಹಾರ ಬೆಳೆಯುತ್ತೀರಿ ಎಂದು ಕೇಳಬೇಕಾಗಿದೆ. ತಾವು ಹೇಳಿದಂತೆ ಈ ಮೇಲೆ ಹೇಳಿದ ಎರಡು ಅಂಶಗಳಿಗನುಸಾರವಾಗಿ ಈ ಶಾಸನ ತಂದಿಲ್ಲ. ಇಂತಹ ಶಾಸನವನ್ನೇಕೆ ತಂದರು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಈಗತಾನೆ ಮಾತನಾಡಿದ ಇಬ್ಬರು ಮಹಿಳಾ ಸದಸ್ಯರು ಈ ಶಾಸನದ ಮೇಲೆ ಮಾತನಾಡಿದರು ಅವರಲ್ಲಿ ಒಬ್ಬರು ಜಪಾನಿಗೆ ಕೂಡ ಹೋಗಿ ಬಂದವರು, ಇಂತಹವರು ಜಪಾನಿನಲ್ಲಿ ಹೇಗೆ ವ್ಯವಸಾಯ ಮಾಡುತ್ತಿದ್ದಾರೆ, ಹೇಗೆ ಕಾನೂನು ಮಾಡಿದ್ದಾರೆ ಎನ್ನುವುದನ್ನಾದರೂ ತಿಳಿದುಕೊಂಡು ಬಂದು ಹೇಳಿದರೆ ಚೆನ್ನಾಗಿರುತ್ತಿತ್ತು, ಅದೊಂದನ್ನೂ ಹೇಳಲಿಲ್ಲ. ಅನಂತರ ಮಾನ್ಯ ಸದಸ್ಯರಾದ ಹಿರೇಮಠ್‌ರವರು ಮುಖ್ಯವಾಗಿ ಮಠಕ್ಕೆ ಮಾನ್ಯತೆ ಕೊಡಬೇಕು. ಅವರಿಗೆ ಮಹಂತರ ಮತ್ತು ಮಠಕ್ಕೆ ಅಭಿಮಾನ ಅದಕ್ಕೋಸ್ಕರ ಮಾನ್ಯತೆ ಕೊಟ್ಟು ಜಮೀನುದಾರರನ್ನೂ ಬಿಟ್ಟುಕೊಡಬೇಕೆಂದರು, ನಿಜವಾಗಿಯೂ ಈ ಭೂಶಾಸನವನ್ನೂ ತಂದು ಜನಗಳಿಗೆ ಅನುಕೂಲ ಮಾಡಿಕೊಡಬೇಕು, ಮತ್ತು ಜನತೆಗೆ ಕಲ್ಯಾಣವಾಗಬೇಕು ಎನ್ನುವ ಪಕ್ಷದಲ್ಲಿ ಇಪ್ಪತ್ತು ಎಕರೆಗಳಿಗಿಂತ ಮೇಲ್ಪಟ್ಟು 500 ಎಕರೆಗಳಷ್ಟು

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ಮಿತಿಯನ್ನಿಟ್ಟುಕೊಂಡು ಮಾಡುವಂತಹ ಈ ಶಾಸನದಿಂದ ಏನೂ ಉಪಯೋಗವಾಗುವುದಿಲ್ಲ ಎಂದು ನನಗನಿಸುತ್ತದೆ ಮತ್ತು ಪ್ರತಿಯೊಬ್ಬರಿಗೂ ಜಮೀನು ಕೊಡಲು ಉಳಿಯುವುದಿಲ್ಲ. ಮುಖ್ಯವಾಗಿ ಈ ಶಾಸನದಿಂದ ಪ್ರಗತಿಯಾಗಬೇಕು ಎನ್ನುವ ದೃಷ್ಟಿಯಿಂದ ನಮ್ಮ ರೆವಿನ್ಯೂ ಮಂತ್ರಿಗಳು ಇಟ್ಟುಕೊಂಡಿದ್ದರೆ, ಸೀಲಿಂಗು ಲಿಮಿಟ್ಟನ್ನು 15 ಎಕರೆಗೆ ಇಳಿಸಿದರೆ ಸುಮಾರು ಇಪ್ಪತ್ತು ಲಕ್ಷ ಎಕರೆಯಷ್ಟು ಜಮೀನು ಬರುತ್ತದೆ. ಅದರಿಂದ ನಿರುದ್ಯೋಗದಲ್ಲಿರುವ ಜನಕ್ಕೆ ಉದ್ಯೋಗವೂ ದೊರಕುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಮಾಡುವುದರಲ್ಲಿ ತಾವೆಲ್ಲರೂ ಸೇರಿದ್ದೀರಿ. ರೆವಿನ್ಯೂ ಮಂತ್ರಿಗಳು ಡಿಕ್ಟೇಟರು ಆಗಿದ್ದರೆ ಹಾಗೆ ಮಾಡಬಹುದಿತ್ತು.

†ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಿಮ್ಮ ಪಕ್ಷದ ಜನಗಳನ್ನು ಒಪ್ಪುವಂತೆ ಮಾಡಿಕೊಳ್ಳುವುದು ನಿಮ್ಮ ಕರ್ತವ್ಯ. ನಾನು ಹೇಳುವುದಾದರೆ ನಮ್ಮ ಪಕ್ಷದ ಪರವಾಗಿ ಹೇಳುವುದಾದರೆ, ನೀವು ಸೀಲಿಂಗನ್ನು ಎಷ್ಟು ಕಡಿಮೆ ಪ್ರಮಾಣದಲ್ಲಿ ಮಾಡುತ್ತೀರೋ ಅದಕ್ಕೆಲ್ಲಾ ನಾವು ನಿಮಗೆ ನಮ್ಮ ಸಹಕಾರವನ್ನು ಕೊಡುತ್ತೇವೆ. ಆದರೆ ಅದಕ್ಕೆ ಒಪ್ಪಿಕೊಳ್ಳಿ ಎಂದರೆ ಅದಕ್ಕೆ ಒಪ್ಪಿಕೊಳ್ಳುವ ಶಕ್ತಿ ಇದ್ದರೆ ನಿಮಗೆ ಆಗ ನಿಮ್ಮ ಮನೋಭಾವನೆ ಏನು ಎನ್ನುವುದು ಗೊತ್ತಾಗುತ್ತಿತ್ತು. ಮತ್ತು ಪ್ರಗತಿಯ ಹಾದಿಯಲ್ಲಿ ಹೋಗುತ್ತೀರಿ ಎಂದು ಹೇಳಬಹುದಾಗಿತ್ತು. ಹೇಗೆಂದರೆ, ಇದಕ್ಕಾಗಿ ನೇಮಕವಾದ Select Committee formation ನೋಡುವುದೇ ಒಂದು ಆಶ್ಚರ್ಯಕರವಾದ ಸಂಗತಿ. ಇದರಲ್ಲಿ ವಾಲಂಟರಿಯಾಗಿ ಸೇರಿಕೊಂಡು ಸದಸ್ಯರಾಗಿರಬೇಕೆಂದು ಒಬ್ಬರು ಮಂತ್ರಿಗಳು ಹಿಂದೆ ಮುಖ್ಯಮಂತ್ರಿಗಳಾಗಿದ್ದ ನಾಯಕರು ಮತ್ತು ಇನ್ನಿತರ ಅಸೆಂಬ್ಲಿಯ ನಾಯಕರು ಹೀಗೆ ಇಷ್ಟು ಸಂಖ್ಯೆಯಲ್ಲಿ ಯಾವಾಗಲೂ ಸೇರಿಲ್ಲದ ಸೆಲೆಕ್ಟ್ ಸಮಿತಿಯಲ್ಲಿ ಇಂತಹ ಒಂದು ಶಾಸನವನ್ನು ಮಾಡುವಾಗ ಅನೇಕ ಸನ್ನಿವೇಶಗಳ ಒತ್ತಡದಿಂದ ಯಶಸ್ವಿಯಾದ ಪೂರ್ಣವಾಗಿ ರೂಪಿಸಲಾಗದಂತಹ ಒಂದು ಶಾಸನವನ್ನು ಪೂರ್ಣವಾಗಿದೆ ಎಂದು ಹೇಳಿರುವಂತಹ ಈ ಶಾಸನ ಪ್ರಗತಿದಾಯಕವಾದ ಬಿಲ್ಲೇನೂ ಅಲ್ಲ. ಇದರ ಮೇಲೆ ಭೂಮಿ ಹಂಚಿಕೆಯನ್ನೂ ಇಲ್ಲಿ ತೆಗೆದುಕೊಳ್ಳಿ.

Section 77

** ** **

(iii) Landless agriculturists and Agricultural labourers.	Not less than one basic holding each.
(iv) Tenants and displaced tenants with less than basic holding and owner-cultivators with less than a basic holding.	Not less than the extent required to make up a basic holding.
(v) Tenants and displaced tenants with less than a family holding, and owner-cultivators with less than a family-holding; and	Not more than the extent required to make up a family holding.

** ** **

Section 77 ನಲ್ಲಿ item (iii) ಮತ್ತು (iv) ಮತ್ತು (v)ರಲ್ಲಿ ಹೇಳಿರುವುದನ್ನೂ ನೋಡಿದರೆ, ವ್ಯವಸಾಯ ಮಾಡುವ ಕಾರ್ಮಿಕನಿಗೆ ಒಂದು ಬೇಸಿಕ್ ಹೋಲ್ಡಿಂಗು ಮತ್ತು (vi)ನೇ ಕಾಲಂನಲ್ಲಿ ಹೇಳಿರುವ ಒಂದು ಫ್ಯಾಮಿಲಿ ಹೋಲ್ಡಿಂಗು ಎಂದಿದೆ. ಇದನ್ನು ನೋಡಿದರೆ Political pull ಎಷ್ಟಿತ್ತು ಎನ್ನುವುದು ಈ ಒಂದು ಸೆಕ್ಷನ್ನಿನಿಂದಲೇ ತಮಗೆ ಚೆನ್ನಾಗಿ ಗೊತ್ತಾಗುತ್ತದೆ. ಯಾರು ತಾನು ವ್ಯವಸಾಯದ ಉದ್ಯಮವನ್ನೂ ಮಾಡಿಕೊಂಡು ಅಭಿವೃದ್ಧಿಪಡಿಸಿ

ಕೊಂಡಿರಬೇಕೆಂದರೆ ಅವನಿಗೆ ಬೇಸಿಕ್ ಹೋಲ್ಡಿಂಗು, ಹೊಸದಾಗಿ ವ್ಯವಸಾಯ ಮಾಡುವವನಿಗೆ ಎಂದರೆ ಅವನಿಗೆ ಒಂದು ಫ್ಯಾಮಿಲಿ ಹೋಲ್ಡಿಂಗು.

ಶ್ರೀ ಕಡಿದಾಳ್ ಮಂಜಪ್ಪ.—ಇದರಲ್ಲೇನೋ ಒಂದು ತಪ್ಪಾಗಿದೆ ಎಂದು ತೋರುತ್ತದೆ. I am glad you have brought this mistake.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ದಿನ ತಾವು ಇಲ್ಲಿ ತಂದಿರುವ ಬಿಲ್ಲಿನಲ್ಲಿರುವ classification ಏನಿದೆ ಅದು ಇದೇ ರೀತಿ ಇದ್ದ ಪಕ್ಷದಲ್ಲಿ ಅದು irrational ನಂತಾಗುತ್ತಲ್ಲ. ಇದರಲ್ಲಿ ಹೇಳಿರುವ ಕ್ಲಾಸಿಫಿಕೇಷನ್ನುಗಳು ಸರಿಯಾಗಿಲ್ಲ. ಮುಖ್ಯ ತಾವು ಕಾಂಪೆನ್ಸೇಷನನ್ನು ಕೊಡಬೇಕೆಂದು ಬೇಸಿಕ್ ಹೋಲ್ಡಿಂಗಿನ ಹತ್ತರಷ್ಟು ಎಂದು ನಿಗದಿ ಮಾಡಿರುವುದನ್ನೂ, ಕೆಲವು ಸಂದರ್ಭಗಳಲ್ಲಿ ಐದನೇ ಒಂದು ಭಾಗ, ಕೆಲವು ಸಂದರ್ಭದಲ್ಲಿ ನಾಲ್ಕನೆಯ ಒಂದು ಭಾಗ ಎಂದರೆ ಹಿಂದೆ ಹತ್ತರಷ್ಟು ಒಂದು ಎಕರೆಗೆ ಸಾವಿರ ಎರಡು ಸಾವಿರ ಅಥವಾ ಮೂರು ಸಾವಿರ ಆದರೆ ಆರನೂರು ಅಥವಾ ಏಳನೂರು ಎಂದು ಕೊಡಬೇಕಾಗುತ್ತದೆ. ಈ ಹಿಂದೆ ಇಂಡಿಯಾ ಸರಕಾರದವರು ನ್ಯಾಷನಲೈಸು ಮಾಡಿದಾಗ ಹತ್ತರಷ್ಟು ಎಂದು ಮಾಡಿಕೊಟ್ಟರು. ಪರದೇಶದವರೇ ಹತ್ತರಷ್ಟು ಎಂದು ಮಾಡಿದರೆ ನಾವು ಇಲ್ಲಿ fair rentನ್ನು......

ಶ್ರೀ ಕಡಿದಾಳ್ ಮಂಜಪ್ಪ.—ಹದಿನೈದರಷ್ಟು ಮಾಡುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೀಗೆ ಫೇರ್ ರೆಂಟನ್ನೂ ನಿಗದಿ ಮಾಡಿದರೆ ವ್ಯವಸಾಯಕ್ಕೆ ಎಷ್ಟು ಜಮೀನು ಉಳಿಯುತ್ತದೆ ಎನ್ನುವುದನ್ನು ನೋಡುವಾಗ ನಾಲ್ಕನೇ ಒಂದು ಭಾಗ ಐದನೇ ಒಂದು ಭಾಗ ಎಂದು ಮಾಡಿದರೆ ನಿಜವಾಗಿಯೂ ಲಾಭವಾಗುತ್ತದೆಯೇ? ಒಂದೆಕರೆಗೆ ಎರಡು ಪಲ್ಲ ರಾಗಿ, ಜೋಳ ಐದನೇ ಒಂದು ಭಾಗ ಎಂದರೆ ಒಂದು 40 ಸೇರು ಬರಬಹುದು, ಸುಮಾರು 40 ಸೇರು ರಾಗಿಯೊಳಗೆ ಏನೊಂದು ಎಕರೆ ರೂಪದಲ್ಲಿ ಸೀಲಿಂಗ್ ಇಟ್ಟುಕೊಂಡು ಆದಾಯ ಖರ್ಚನ್ನು ಲೆಕ್ಕ ಹಾಕುವಾಗ ತನ್ನ ಖರ್ಚು ಅರ್ಧ ಭಾಗವೆಂದು ಲೆಕ್ಕ ಹಾಕಿದ್ದರೂ ಇನ್ನರ್ಧ ಭಾಗದಲ್ಲಿ ಕಾಲು ಭಾಗವನ್ನು ಮಾಲೀಕನಿಗೂ ಮಿಕ್ಕ ಕಾಲು ಭಾಗವನ್ನು ಟೆನೆಂಟಿಗೂ ಕೊಟ್ಟರೆ ಆಗ ಇದರಲ್ಲಿ ರ್ಯಾಷನಲಿಜಂ ಇದೆ ಎಂದು ಹೇಳಬಹುದು. ಹಾಗೇಯೇ ತರೀ ಜಮೀನಿನಲ್ಲಿಯೂ 1/3 ಭಾಗವನ್ನು ತನ್ನ ಖರ್ಚೆಂದು ಲೆಕ್ಕ ಹಾಕಿದ್ದರೂ ಮಿಕ್ಕ 1/3 ಭಾಗವನ್ನು ಮಾಲೀಕನಿಗೂ, ಇನ್ನುಳಿದ 1/3 ಭಾಗವನ್ನು ಟೆನೆಂಟಿಗೂ ಕೊಟ್ಟರೆ ಅದು ನ್ಯಾಯವಾಗುತ್ತದೆ. ಅದನ್ನೂ ಕೂಡ ತಾವು ಆಲೋಚನೆ ಮಾಡಬೇಕು.

ಇನ್ನು ಮಿಕ್ಕ ವಿಚಾರಗಳನ್ನು ನಾನು ತಿದ್ದುಪಡಿಗಳನ್ನು ಈ ಬಗ್ಗೆ ಈ ಸಭೆಯಲ್ಲಿ ಮಂಡಿಸುವಾಗ ನನ್ನ ಪೂರ್ಣ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇನೆಂದು ಹೇಳಿ ಅಧ್ಯಕ್ಷರು ನನಗೆ ಈ ವರದಿ ಮೇಲೆ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri Y. MANJAIYA SHETTY (Baindur).—Mr. Speaker, in supporting the Bill which has come out of the Select Committee on Land Reforms, I wish to make certain observations. I am happy that at the time of introducing the report of the select committee, the Hon'ble Revenue Minister has announced that there is no question of going back on land reforms. I hope he will stick on to it. Not only that, but he will go forward and see that the Bill is passed as expeditiously as possible. I need not say that land reform is the committee policy of the party which holds the reigns of the Government and to which I and many of us belong. Naturally as per the directions received from time to time both from the Planning Commission and other sources, the comprehensive

(Sri. Y. MANJAIAH SHETTY)

land reforms ought to have been passed before the Second Five-Year Plan period. Somehow or other due to various reasons which I need not and do not venture to narrate in this House, there has been considerable delay in introducing the Bill. Yet-better late than never. I wish the Government should see that the Bill is passed not only in this session but should also see that the Bill is implemented within a couple of months. I must say with due respect to the sponsorros of this Bill that the small holders are not treated fairly and justly. The attitude of the Government with regard to small holders is rather unsympathetic, if not cruel. I must say with all sincerity at my command that the small holders deserve better consideration and sympathy at the hands of the Government. The small holder as we find in the Bill, is one who holds land not exceeding a basic holding. This provision in the Bill is too inadequate. When Communists were ruling in Kerala they had brought forward a Bill which has now become an Act, allowing the small holders to hold an extent of five acres. But when the Bill went to the President for his assent, he never gave his assent to the Bill. He referred it back to the Kerala Government saying that the protection given in the Bill for a small holder is too inadequate and that every small holder should have ten acres. So, the Bill came back and necessary amendment was carried and subsequently he gave his assent. With that background, if this Bill is passed as it is and rushed to Delhi to have the assent of the President. I do not think the President will give his assent. In such a case the implementation will be delayed. I am saying this with all earnestness and seriousness. If the Government want this Bill to be passed and enforced as early as possible. Proper protection for small holders should be given. Otherwise the Bill will be sent back by the president which may result in delay.

So, it is better if the Government take stock of all these circumstances and should suitably amend the Bill giving larger concessions to small holders. Even the members of the Select Committee have given a dissenting note with regard to this matter. The members of the P.S.P. Sri V. Srinivasa Shetty, Sri M. Ramappa and Sri U. M. Madappa have in their dissent note stated that at least five acres should be fixed as a limit which a small holder can have. I am sure they will also send amendments to that effect.

Regarding compensation in Clause 47 (2) (a) (ii), in the case of lands held by permanent tenants the compensation fixed is six times the fair rent. I think it is too inadequate. Long before the Congress thought of granting fixity of tenure and any Government thought about it, some good land holders have granted fixity of tenure by granting lands on ಮೂಲಗೇಣಿ. Just because they have been good we should not penalise them at this stage when we take away lands from them. If they had not leased lands on permanent basis they should have continued......

Sri KADIDAL MANJAPPA.—For the benefit of the House I shall read the provision in the Kerala Bill :

†Sri Y. MANJAYYA SHETTY.—It is just to protect the tenant from resumption by small landholders. In my own District I know that so many landholders have leased out their property to tenants and they may be allowed to continue tenancy in regard to the land owned by them upto five acres. I am not for evicting tenants and resuming land up to 5 or 10 acres. That must be understood by the Hon'ble Minister. With regard to land held by permanent tenants, I wish to submit that at least 15 times the fair rent may be paid as compensation to the landholder. As per Section 72, with regard to surplus lands which vests with the Government over and above the ceiling area, the Compensation is fixed at 10 times the annual gross produced. I do not see why there should be a distinction in the matter of fixing compensation of lands taken over by Government, whether it is non-resumable land or surplus land. This distinction should not be there and all the lands taken over by the Government or vested with the Government either as non-resumable land or surplus land should be paid the same rate of compensation. One lacuna I find in this Bill is that when the non-resumable land or the surplus land vests with the Government, it is stated in the Bill that the tenant who was occupying those lands have to pay rent not to the landlord but to the Government. I can understand about the provisions in the Bill that when the land vests with the Government naturally the tenant is the tenant of the Government and not of the landholder. But the lacuna is when the land vests with the Government and when the Government recovers or collects rent from the tenant, what is it that the landlord gets till the compensation is fixed or paid? He does not get anything as per the provisions of the Bill between the time the land vests with the Government and the time when compensation is paid. We know when Government machinery begins to work for fixing compensation and all those things, it will take two or three or five years. During that epriod what has the landlord to do? Is he to starve? So, the best remedy I should like to suggest is at least to pay interest at the rate of 4½ per cent on the compensation amount that may be fixed later on from the date when the Government notifies the vesting of the land till the date of payment of compensation or the landlord may be allowed to continue to receive or collect the rent till the compensation is fixed. At least the interest may be paid to the landlord on the compensation amount which he may receive later on from the day of vesting of the land with the Government. The fair rent is to be paid from the day when the Bill comes into force. Till then, the usual contract rent or the fair rent fixed by other enactments in varous parts of the State will continue. but there is ample provision for the recovery of fair rent.

Sri KADIDAL MANJAPPA.—The landlord will be allowed to recover the rent until the non-resumable part of the land vests with the Government.

Sri Y. MANJAYYA SHETTY.—What about the surplus land? When the non-resumable land or surplus land vests with the Government there is a provision that the tenant who occupies the land should pay rent direct to Government.

Sri KADIDAL MANJAPPA.—After it vests with the Government.

Sri Y. MANJAYYA SHETTY.—The Hon'ble Minister knows the procedure how the Government machinery works for fixing compensation I may tell you that it will take three or four years. From the date of vesting of land with the Government and the actual payment of compensation, it will take another two years. Within this long period, what is the landlord to get I ask the Government and I ask the Hon'ble Minister? There is no provision in the Bill to fill up that lacuna. I wish the Hon'ble Minister considers this and makes suitable provision for either allowing the landlord to recover the rent till he receives the first instalment of compensation or the comensation amount which may be fixed later on to carry interest at 4½ per cent from the date of notification of the vesting of land with the Government. Unless that is done, it will cause real hardship. Sufficient provision is made in the Bill for recovery of fair rent in the Act. But what about rent which has accrued before this Act comes into force? The Government should make suitable provision in the Bill to collect the arears of rent.

Sri J. B. MALLARADHYA.—I have sent an amendment to the effect that not exceeding 2 years arrears of rent must be paid. The tenant should be insisted upon to pay 2 years' rent because in a large majority of cases many of our landlords had not given receipts.

Sri Y. MANJAYYA SHETTY.—Considerable time the Government may take for implementing the provisions. When the Act comes into force, considerable time will be taken by the Government for implementing the ceiling, determining the extent of non-resumption land, etc. I am sure it will not take less than two years and during that period, provision regarding the fair rent should be implemented immediately. I know in certain areas of the State, fair rent is 40 per cent of the gross producer People have been agitating that it is too high because in Hyderabad and Bombay Karnatak, it is low and in Madras and some other areas, it is high. In South Kanara it is 40 per cent of the gross produce as per Madras Act. Even after passing of the Bill, if these tenants are made to pay under Madras Act or some other Act 40 per cent of the crops produce, what is the use of this Bill? So, if there is any delay in implementing the provis ons of the Bill, at least provision in regard to fair rent should be implemented immediately before the current rent is recovered by the landholder. Certain representations were made both to the Government and the Members of the Select Committee by the members of Aliya Santhana Family from South Kanara District. Some find it very difficult to understand the problem. We cannot help it. Anyhow, the Select Committee has recommended for the amendment of the Madras Aliya Santhana Act of 1949 before the Land Reforms Act is enforced.

I am really thankful to the members of the Select Committee for having made this wise suggestion. The amending Bill has to be passed in this session

Sri C. J. MUCKANNAPPA.—Do you throw the blame on the members of this House or on the Government!

Sri Y. MANJAYYA SHETTY.—It is the responsibility of the Government to honour the recommendation of the Select Committee. I wish a Bill amending the Aliya Santhana Act of 1949 is immediately rushed through and passed before this Bill is passed and introduced in the Council.

With regard to the classification of land, there is some mistake with regard to first class land. Some omission is made. It is not made clear. So I wish it is made clear so that the land covered in the first class is one which is in a nala area. Unless that is made clear, it will lead to all sorts of confusion and tribunal may make all sorts of interpretations. So it is better if it is made clear, by adding the land covered in class I, which is in a channel area.

With these observations and with the fond hope of having this Bill passed as early as possible, not onl passed early but also implemented at least in a couple of months, I support the Bill. I wish the Minister for Revenue who piloted the Bill, long life and prosperity

Sri L. B. BIRJE.—(*Spoke in Marathi*).

Sri KADIDAL MANJAPPA.—If the Honourable Member wants me to follow his speech, I would like to ask him to say a few things in Kannada.

Sri L. B. BIRJE.—(*Marathi*).

Mr. DEPUTY SPEAKER.—The House will now rise and meet to-morrow at 1 P.M.

The House adjourned at Six of the Clock to meet again at One of the Clock on Tuesday the 5th September 1961.

WD 6633—GPB—500—(L.A. New)—7-4-67